# Karnataka Lokayukta

(Under Section 7 of the Karnataka Lokayukta Act, 1984)

CASE NUMBER : **COMPT/LOK/BGM/1741/2019**

District : **Haveri**

**BY :**

**1. SUO MOTO,**

Orders of Honble Lokayukta Dated 24-06-2019.

Mobile/Landline:

**COMPLAINANT/S**

**AGAINST :**

**1. GIRISH BIMAPPA OLEKER**

Panchayath Development Officer, Masuru Grama Panchayath, Hirekerur (Rattihalli) Taluk Haveri District.

**2. RAJU KURVETTAPPA SUNEGAR**

President, Masuru Grama Panchayath, Hirekerur Taluk, Haveri District.

**3. RAGHU GANESHAPPA CHENNEGIRI**

Member, Masuru Grama Panchayath, Hirekerur Taluk, Haveri District.

**4. RENUKAPPA**

S/o Chennabasappa, Sajanshettar, Member,Masuru Grama Panchayath, Hirekerur Taluk, Haveri District.

**5. CHENNABASAPPA VEERAPPA RAMAJJANAVAR**

Member, Masuru Grama Panchayath, Hirekerur (Rattihalli) Taluk Haveri District.

**6. K.V. CHANDRAIAH**

Assistant Engineer, Eta Niravari Sub-Division, Hangal, Haveri District.

**7. JAVEEDA**

S/o Moulali Mulla, Assistant Engineer, Eta Niravari Sub-Division, Hangal, Haveri District.

**8. ANILKUMAR M.H.**

S/o Mahantesh B.H., NREG Techinical Assistant Engineer, Masuru Grama Panchayath, Hirekerur Taluk, Haveri District.

**9. K.V. HACHINAMANI**

Assistant Executive Engineer, Panchayath Raj Engineering, Sub-Division, Hirekerur Taluk, Haveri District.

**10. Dr. MANOHARA P DYABERI**
I/c Chief Executive Officer, Hirekerur Taluk Panchayath, Hirekerur Taluk, Haveri District.

**11. SANTOSHKUMAR CHANDRADHAR TALAKAL**
Assistant Director, (G.U) Hirekerur Taluk Panchayath, Hirekerur Taluk, Haveri District.

**RESPONDENT/S**

| | |
|---|---|
| **Allegation/Grievance Brief :** | Dereliction of duty |
| Received From : | suo-moto Misc/2605/2018/ARLO-4 |
| Received On : | 27-06-2019 |

**Seal and Signature** 27/06/19

| | |
|---|---|
| **Complaint stands allotted to :** | **ARLO-5** |

**SCRUTINY AND OPINION**

# KARNATAKA LOKAYUKTA, BENGALURU

No.Compt/Misc./2605/2018/ARLO-4 Date : 24.06.2019

## ORDER

On the basis of the pseudonymous petition dated 4.10.2018 stated to have been sent by one Sri Mohan Nannuri and Sri Raghu Channagiri of Masura village, Hirekerur Taluk, Haveri District, alleging that there are serious irregularities in execution of the MG-NREG scheme relating to the year 2017-18, I had referred the said petition to the Additional Director General of Police, Karnataka Lokayukta (herein after for short as ADGP, KLA), for getting an investigation done with regard to the correctness of the allegations made, through Lokayukta Police and submit a report. Accordingly, pursuant to the directions given by me, the ADGP, KLA, had directed the Superintendent of Police, Karnataka Lokayukta, Davangere, to investigate and report. The Superintendent of Police, Karnataka Lokayukta, Davangere got the investigation conducted through the Police Inspector, Karnataka Lokayukta,

Haveri and submitted a report of Police Inspector, Haveri, dated 11.03.2019 to the ADGP, KLA, Bengaluru. The said report has been scrutinized by the Superintendent of Police-5, Karnataka Lokayukta and the same was placed before the Inspector General of Police and ADGP, KLA for their consideration. Accordingly, the ADGP, KLA, on 31.5.19, has approved the report of the Investigation Officer. It is useful to extract the relevant portion of the report of the Investigation Officer i.e., Police Inspector, Karnataka Lokayukta, Haveri, which reads as here under –

**ವಿಚಾರಣಾ ಸಾರಾಂಶ:**

1. ಹಿರೇಕೆರೂರು ತಾಲ್ಲೂಕಿನ ಬೆಳ್ಳೂರು ಗ್ರಾಮ ರಿ.ಸ.ನಂ. 101 ಕ್ಷೇತ್ರ 4 ಎಕರೆ 30 ಗುಂಟೆ, ಬೆಳ್ಳೂರು ಗ್ರಾಮ ರಿ.ಸ.ನಂ.127 ಕ್ಷೇತ್ರ 1 ಎಕರೆ 2 ಗುಂಟೆ, ಬೆಳ್ಳೂರು ಗ್ರಾಮದ ರಿ.ಸ.ನಂ. 102/2 ಕ್ಷೇತ್ರ 1 ಎಕರೆ 30 ಗುಂಟೆ ಮತ್ತು ಬೆಳ್ಳೂರು ಗ್ರಾಮದ ರಿ.ಸ.ನಂ. 102/3 ಕ್ಷೇತ್ರ 1 ಎಕರೆ ಒಟ್ಟು 8 ಎಕರೆ 22 ಗುಂಟೆ ಜಮೀನುಗಳು ಮಾಸೂರು ಗ್ರಾಮದ ಶ್ರೀಮತಿ ಸಾವಿತ್ರಮ್ಮ ಕೋಂ. ಮಲ್ಲೇಶಪ್ಪ ಕ್ವಾರಡಿ ಇವರ, ಇವರ ಗಂಡ ಮತ್ತು ಮಕ್ಕಳ ಹೆಸರಿನಲ್ಲಿರುತ್ತವೆ. ಹಾಗಾಗೀ ಇವರು ಸಣ್ಣ ಮತ್ತು ಅತೀ ಸಣ್ಣ ರೈತರಾಗಿರವುದಿಲ್ಲ. ಸದರಿ ಜಮೀನುಗಳು ಮಾಸೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಅವುಗಳು ಹಿರೇಕೆರೂರು ತಾಲ್ಲೂಕಿನ ನಿಡನೇಗಿಲು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟಿರುತ್ತವೆ.
2. ಇವರು ಸಣ್ಣ ಮತ್ತು ಅತೀ ಸಣ್ಣ ರೈತರಲ್ಲದಿದ್ದರೂ ಮತ್ತು ಇವರ ಜಮೀನುಗಳು ಮಾಸೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇಲ್ಲದಿದ್ದರೂ ಸಹ ಶ್ರೀ ಗಿರೀಶ ಓಲೇಕಾರ, ಪಿಡಿಓ ಮತ್ತು ಶ್ರೀ ರಾಜು ಕುರವತ್ತೆಪ್ಪ ಸುಣಗಾರ, ಅಧ್ಯಕ್ಷರು, ಮಾಸೂರು ಗ್ರಾಮ ಪಂಚಾಯತಿ ಇವರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಕಾಮಗಾರಿಗಳನ್ನು ನೀಡಿರುತ್ತಾರೆ.

3. ಶ್ರೀ ಗಿರೀಶ ಕ್ವಾರಡಿ ಸಾ: ಮಾಸೂರು ಇವರ ತಾಯಿ ಶ್ರೀಮತಿ ಸಾವಿತ್ರಮ್ಮ ಹೆಸರಿನಲ್ಲಿ **"ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಬಲದಂಡೆ ಕಾಲುವೆಗೆ ಹೊಂದಿಕೊಂಡು ಇರುವ ಸಾವಿತ್ರಮ್ಮ ಕ್ವಾರಡಿ ಇವರ ಜಮೀನಿನಲ್ಲಿ ಕಲ್ಲು ಪಿಚ್ಚಿಂಗ್ ಮತ್ತು ಭೂ ಅಭಿವೃದ್ಧಿ ಪಡಿಸುವುದು"** ತಂದೆ ಮಲ್ಲೇಶಪ್ಪ ಕ್ವಾರಡಿ ಇವರ ಹೆಸರಿನಲ್ಲಿ **"ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಎಡದಂಡೆ ಕಾಲುವೆಗೆ ಹೊಂದಿಕೊಂಡಿರುವ ಶ್ರೀ ಮಲ್ಲೇಶಪ್ಪ ಕ್ವಾರಡಿ ಇವರ ಜಮೀನಿನಲ್ಲಿ ಭೂಮಿ ಸಮತಟ್ಟು ಮತ್ತು ಕಲ್ಲು ಪಿಚ್ಚಿಂಗ್ ಮಾಡುವುದು"** ಈ ಎರಡು ವೈಯಕ್ತಿಕ ಕಾಮಗಾರಿಗಳಿಗೆ 2018–19ರಲ್ಲಿ ತಲಾ 5 ಲಕ್ಷ ಮತ್ತು 3 ಲಕ್ಷಗಳ ಕ್ರಿಯಾ ಯೋಜನೆ ತಯಾರಿಸಿಕೊಂಡಿರುತ್ತಾರೆ. ಅಂದಾಜು ಪತ್ರಿಕೆಯನ್ನು ಶ್ರೀ ಕೆ.ವಿ.ಚಂದ್ರಯ್ಯ, ಎ.ಇ. ಏತ ನೀರಾವರಿ ಉಪವಿಭಾಗ, ಹಾನಗಲ್ ರವರು 2017–18ರಲ್ಲಿ ತಯಾರಿಸಿಕೊಂಡಿರುತ್ತಾರೆ. ಕ್ರಿಯಾ ಯೋಜನೆ ಆಗುವ ಪೂರ್ವದಲ್ಲಿಯೇ ಅಂದಾಜು ಪತ್ರಿಕೆ ತಯಾರಿಸಲಾಗಿದೆ.
4. ಶ್ರೀಮತಿ ಸಾವಿತ್ರಮ್ಮ ಕ್ವಾರಡಿ ಇವರ ಹೆಸರಿನ ಕಾಮಗಾರಿಗೆ ದಿ.15–02–2017 ರಂದು ಆಡಳಿತಾತ್ಮಕ ಅನುಮೋಧನೆಯನ್ನು ನೀಡಿದ್ದು, ದಿ.14–02–2018 ರಂದು ಪ್ರಭಾರ ಎ.ಇ.ಇ. ಶ್ರೀ ಜಾವೇದ ಮುಲ್ಲಾ, ಏತ ನೀರಾವರಿ ಉಪವಿಭಾಗ, ಹಾನಗಲ್ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.
5. ವೈಯಕ್ತಿಕ ಕಾಮಗಾರಿಗಳಾದ ಭೂ ಅಭಿವೃದ್ಧಿ ಅಥವಾ ಪ್ಯಾಕೇಜ್ ಕಾಮಗಾರಿಗಳನ್ನು ಕೈಕೊಳ್ಳಲು ರೂ.10,000/– ಅಥವಾ ರೂ.83,000/– ಗಳನ್ನು ಖರ್ಚು ಮಾಡಲು ನಿಯಮಾವಳಿಗಳಲ್ಲಿ ಅವಕಾಶವಿರುವ ಬಗ್ಗೆ ಶ್ರೀ ಸಂತೋಷಕುಮಾರ ತಳಕಲ್ಲ, ಪ್ರಭಾರ ಇ.ಓ. ಟಿ.ಪಿ.,ಹಿರೇಕೆರೂರು ರವರು ಹೇಳಿಕೆಯನ್ನು ನೀಡಿದ್ದು, ಸದರಿ ನಿಯಮವನ್ನು ಉಲ್ಲಂಘಿಸಿ ಮಾಸೂರು ಗ್ರಾಮ ಪಂಚಾಯತಿ ಪಿಡಿಓ ಶ್ರೀ ಗಿರೀಶ ಓಲೇಕಾರ ಮತ್ತು ಅಧ್ಯಕ್ಷರಾದ ಶ್ರೀ ರಾಜು ಸುಣಗಾರ ಇವರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ತಲಾ 5 ಲಕ್ಷ ಮತ್ತು 3 ಲಕ್ಷಗಳ ಕ್ರಿಯಾ ಯೋಜನೆಯನ್ನು ತಯಾರಿಸಿಕೊಂಡಿರುತ್ತಾರೆ.
6. ಶ್ರೀ ಕೆ.ವಿ.ಚಂದ್ರಯ್ಯ, ಎ.ಇ., ಏತ ನೀರಾವರಿ ಉಪವಿಭಾಗ, ಹಾನಗಲ್ ರವರು ಅಂದಾಜು ಪತ್ರಿಕೆಯನ್ನು ತಯಾರಿಸಿಕೊಳ್ಳುವಾಗ ವೈಯಕ್ತಿಕ ಕಾಮಗಾರಿಗಳಿಗೆ ಎಷ್ಟು ಮೊತ್ತವನ್ನು ಖರ್ಚು ಮಾಡಬೇಕು ಅನ್ನುವುದನ್ನು ತಿಳಿದುಕೊಳ್ಳದೇ ಅಧ್ಯಕ್ಷರು ಮತ್ತು ಪಿಡಿಓ ರವರು ತಯಾರಿಸಿಕೊಂಡ ಕ್ರಿಯಾ ಯೋಜನೆಗೆ ಅನುಗುಣವಾಗಿ ಅಂದಾಜು ಪತ್ರಿಕೆಯನ್ನು ತಯಾರಿಸಿಕೊಂಡಿರುತ್ತಾರೆ.

7. ಶ್ರೀ ಜಾವೇದ ಮುಲ್ಲಾ, ಪ್ರಭಾರ ಎ.ಇ.ಇ. ಏತ ನೀರಾವರಿ ಉಪವಿಭಾಗ, ಹಾನಗಲ್ ರವರು ಅಂದಾಜು ಪತ್ರಿಕೆಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡುವಾಗ ವೈಯಕ್ತಿಕ ಕಾಮಗಾರಿಗಳಿಗೆ ಎಷ್ಟು ಮೊತ್ತವನ್ನು ಖರ್ಚು ಮಾಡಬೇಕು ಅಂತಾ ತಿಳಿದುಕೊಳ್ಳದೇ ಎ.ಇ. ರವರು ತಯಾರಿಸಿಕೊಂಡ ಅಂದಾಜು ಪತ್ರಿಕೆಗೆ ತಾಂತ್ರಿಕ ಅನುಮೋಧನೆ ನೀಡಿರುತ್ತಾರೆ.
8. ಎನ್.ಎಂ.ಆರ್.ದಲ್ಲಿ ಪಡೆದುಕೊಂಡ ಕೂಲಿಕಾರರ ಸಹಿಗಳನ್ನು ಮತ್ತು ಬ್ಯಾಂಕಿನಿಂದ ಪಡೆದುಕೊಂಡ ಮಾದರಿ ಸಹಿಗಳನ್ನು ಪರಿಶೀಲಿಸಿದಾಗ ಹೊಂದಕ್ಕೊಂದು ಹೊಂದಾಣಿಕೆ ಕಂಡುಬರುವುದಿಲ್ಲ. ಎನ್.ಎಂ.ಆರ್.ದಲ್ಲಿಯ ಕೂಲಿಕಾರರ ಸಹಿಗಳನ್ನು ಒಂದೇ ರೀತಿಯಲ್ಲಿ ಒಬ್ಬನೇ ವ್ಯಕ್ತಿ ಮಾಡಿದಂತೆ ಮೇಲ್ನೋಟಕ್ಕೆ ಕಂಡುಬರುತ್ತವೆ.
9. ಶ್ರೀಮತಿ ಸಾವಿತ್ರಮ್ಮ ಇವರ ಹೆಸರಿನ ಕಾಮಗಾರಿಗಳ ಫೋಟೋಗಳಲ್ಲಿ ಕೂಲಿಕಾರರು ಕೆಲಸ ಮಾಡುವ ಒಂದೇ ಒಂದು ಫೋಟೋ ಇರುವುದಿಲ್ಲ. ಟ್ರ್ಯಾಕ್ಟರಿನಿಂದ ಮಣ್ಣು ತಂದು ಅನ್‌ಲೋಡ್ ಮಾಡುವ ಫೋಟೋ ಇರುತ್ತದೆ. ಹೊರಗಿನಿಂದ ಮಣ್ಣನ್ನು ತಂದು ಹಾಕುವ ಬಗ್ಗೆ ಅಂದಾಜು ಪತ್ರಿಕೆಯಲ್ಲಿ ನಮೂದಿಸಿರುವುದಿಲ್ಲ.
10. ಶ್ರೀಮತಿ ಸಾವಿತ್ರಮ್ಮ ಇವರ ಹೆಸರಿನ ಕಾಮಗಾರಿಯಲ್ಲಿ ಶ್ರೀ ಕೆ.ವಿ.ಚಂದ್ರಯ್ಯ, ಎ.ಇ. ಇವರು ಕೈಯಿಂದ ಬರೆದ ಎಫ್&ಎಫ್ ಬಿಲ್ಲುಗಳಲ್ಲಿ ಪೂರೈಕೆದಾರರು ಶ್ರೀ ಅತಾವುಲ್ಲಾ ಬಡಗಿ ಸಾ:ಮಾಸೂರು ಅಂತಾ ಬರೆದಿದ್ದು, ಆದರೆ ಎಫ್&ಎಫ್ ಬಿಲ್ಲುಗಳಲ್ಲಿ ನಮೂದಿಸಿದ ಒಟ್ಟು ಮೊತ್ತ ರೂ.2,21,920/-ಗಳಿಗೆ ಶ್ರೀ ರಮೇಶ ಕೆ.ಜೆ., ಗುತ್ತಿಗೆದಾರರ ಬಿಲ್ಲುಗಳು ಇದ್ದು, ಪಿಡಿಓ ಮತ್ತು ಅಧ್ಯಕ್ಷರು ಇಂಜಿನಿಯರ್ ರವರು ಬರೆದುಕೊಟ್ಟ ಎಫ್&ಎಫ್ ಬಿಲ್ಲುಗಳನ್ನು ಪರಿಶೀಲಿಸದೇ ರಮೇಶ ಕೆ.ಜೆ. ಇವರ ಹೆಸರಿಗೆ ಬಿಲ್ಲಿನ ಮೊತ್ತ ಪಾವತಿಸಲು ಎಫ್‌ಟಿಓ ಮುಖಾಂತರ ಕ್ರಮ ಕೈಕೊಂಡಿದ್ದು, ಆದರೆ ಇನ್ನೂ ಬಿಲ್ಲುಗಳ ಮೊತ್ತ ಪಾವತಿಯಾಗಿರುವುದಿಲ್ಲ. ಕೂಲಿಕಾರರ ಕೂಲಿ ಮೊತ್ತ ರೂ.2,69,528/-ಗಳನ್ನು ಎಫ್‌ಟಿಓ ಮುಖಾಂತರ ಕೂಲಿಕಾರರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿದೆ.
11. ಶ್ರೀ ಮಲ್ಲೇಶಪ್ಪ ಕ್ವಾರಡಿ ಇವರ ಹೆಸರಿನ ಕಾಮಗಾರಿಯಲ್ಲಿ ಪಿಡಿಓ ರವರು ಟ್ರಾನ್ಸಪೋರ್ಟೆಶನ್ ಚಾರ್ಜಗಾಗಿ ದರಪಟ್ಟಿಯನ್ನು ಆಹ್ವಾನಿಸಿದ್ದು, ಯಾವ ವಸ್ತುವನ್ನು ಸಾಗಾಟ ಮಾಡಲು ಅಂತಾ ನಮೂದಿಸಿಲ್ಲ. ದರಪಟ್ಟಿ ಬಂದ ನಂತರ ಪಿಡಿಓ ರವರು ಮಾಸೂರು ಗ್ರಾಮ ಪಂಚಾಯತಿ ಸದಸ್ಯರಾಗಿರುವ ಶ್ರೀ ರಘು ಚನ್ನಗಿರಿ ಇವರ ದರಪಟ್ಟಿಯನ್ನು ಒಪ್ಪಿಕೊಂಡು, ಅವರಿಗೆ

ಕಾರ್ಯಾದೇಶ ನೀಡಿರುತ್ತಾರೆ. ಕಾರ್ಯಾದೇಶದಲ್ಲಿಯೂ ಸಹ ಯಾವ ವಸ್ತುವನ್ನು ಸಾಗಾಟ ಮಾಡಬೇಕು ಅಂತಾ ನಮೂದಿಸಿಲ್ಲ.

12. ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ರಘು ಚನ್ನಗಿರಿ ಇವರು ದಿ.03-01-2018, 24-01-2018 ರಂದು 3 ಬಿಲ್ಲುಗಳನ್ನು ನೀಡಿದ್ದು, ಸದರಿ ಬಿಲ್ಲಿನಲ್ಲಿ ಕ್ರಮವಾಗಿ ರೂ.30400/-, ರೂ. 56240/-, ರೂ.28880/-ಗಳನ್ನು ನಮೂದಿಸಿದ್ದು, ಒಟ್ಟು ರೂ. 115520/-ಗಳನ್ನು ದಿ.08-06-2018 ರಂದು ಎಫ್‌ಟಿಓ ಮುಖಾಂತರ ಜಮಾ ಮಾಡಿರುತ್ತಾರೆ. ರಘು ಚನ್ನಗಿರಿ ಇವರು ನೀಡಿದ ಬಿಲ್ಲುಗಳಲ್ಲಿ ಸಪ್ಲೈ ಆಫ್ ಟ್ರಾನ್ಸಪೋರ್ಟೇಶನ್ ಅಂತಾ ಮಾತ್ರ ಬರೆಯಲಾಗಿದೆ. ಸದರಿ ಬಿಲ್ಲುಗಳನ್ನು ಇಂಜಿನಿಯರ್ ರವರು ದೃಢೀಕರಿಸಿರುವುದಿಲ್ಲ.

13. ಡಿ.ಎಸ್.ಸಿದ್ದಲಿಂಗಪ್ಪನವರ ಇವರು ಈ ಕಾಮಗಾರಿಯಲ್ಲಿ ಟ್ರ್ಯಾಕ್ಟರ್ ಬಾಡಿಗೆಗೆ ಕೊಟ್ಟಿದ್ದು, ಅದರ ಬಾಡಿಗೆ ರೂ.1,44,400/-ಗಳು, ಅವರು ದಿ.30-07-2017 ರಂದು ಬಿಲ್ ನಂ.246 ನೇದ್ದನ್ನು ನೀಡಿದ್ದು ಸದರಿ ಬಿಲ್ಲು ಕಡತದಲ್ಲಿ ಇರುವುದಿಲ್ಲ. ಆದರೆ ಪಿಡಿಓ ರವರು ಸದರಿ ಬಿಲ್ಲಿನ ಮೊತ್ತವನ್ನು ದಿ.08-06-2018 ರಂದು ಎಫ್‌ಟಿಓ ಮುಖಾಂತರ ಜಮಾ ಮಾಡಿರುತ್ತಾರೆ.

14. ಶ್ರೀ ಮಲ್ಲೇಶಪ್ಪ ಕ್ವಾರಡಿ ಇವರ ಹೆಸರಿನ ಕಾಮಗಾರಿಯ ಪೋಟೋಗಳನ್ನು ಗಮನಿಸಿದಾಗ ಕೇವಲ 4 ಜನ ಕೂಲಿಕಾರರು ಕಲ್ಲು ಪಿಚ್ಚಿಂಗ್ ಮಾಡುವ ದೃಶ್ಯ ಕಂಡುಬರುತ್ತದೆ. ಮಹಿಳೆಯರು ಕೆಲಸ ಮಾಡುತ್ತಿರುವ ಬಗ್ಗೆ ಯಾವುದೇ ಪೋಟೋಗಳು ಕಡತದಲ್ಲಿ ಇರುವುದಿಲ್ಲ.

15. ಶ್ರೀ ಮಲ್ಲೇಶಪ್ಪ ಕ್ವಾರಡಿ ಇವರ ಹೆಸರಿನ ಕಾಮಗಾರಿಯಲ್ಲಿ ಕೂಲಿಕಾರರಿಗೆ ಒಟ್ಟು ರೂ.1,35,464/-ಗಳನ್ನು ಮತ್ತು ಸಾಮಗ್ರಿಗಾಗಿ ಒಟ್ಟು ರೂ.2,59,920/-ಗಳನ್ನು ಒಟ್ಟು ರೂ.3,95,384/-ಗಳನ್ನು ಖರ್ಚು ಮಾಡಿರುತ್ತಾರೆ. ಪಿಡಿಓ ಮತ್ತು ಅಧ್ಯಕ್ಷರು ಯಾವುದೇ ಅನುಮತಿ ಇಲ್ಲದೇ ಅಂದಾಜು ಮೊತ್ತಕ್ಕಿಂತ ರೂ.95,384/-ಗಳನ್ನು ಹೆಚ್ಚುವರಿಯಾಗಿ ಖರ್ಚು ಮಾಡಿರುತ್ತಾರೆ.

16. ಶ್ರೀ ರೇಣುಕಪ್ಪ ಚನ್ನಬಸಪ್ಪ ಸಜ್ಜನಶೆಟ್ರು ಇವರು ಹಾಲಿ ಮಾಸೂರು ಗ್ರಾಮ ಪಂಚಾಯತಿ ಸದಸ್ಯರಿದ್ದು, ಸದರಿಯವರು ತಮ್ಮ ಪ್ರಭಾವವನ್ನು ಬಳಸಿಕೊಂಡು ಅವರ ಅಣ್ಣ ಶ್ರೀ ಕೋಟ್ರಪ್ಪ ಚನ್ನಬಸಪ್ಪ ಸಜ್ಜನಶೆಟ್ರು ಇವರು ಸಣ್ಣ ರೈತರಲ್ಲದಿದ್ದರೂ ಮತ್ತು ಇವರ ಜಮೀನುಗಳು ಮಾಸೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡದಿದ್ದರೂ ಸಹ 2 ಕಾಮಗಾರಿಗಳನ್ನು ಹಾಕಿಸಿಕೊಂಡಿರುತ್ತಾರೆ.

17. ಶ್ರೀ ರೇಣುಕಪ್ಪ ಸಜ್ಜನಶೆಟ್ರು ಇವರು ತಮ್ಮ ಅಣ್ಣ ಕೋಟ್ರಪ್ಪ ಇವರ ಹೆಸರಿನಲ್ಲಿ **"ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಎಡದಂಡೆ ಕಾಲುವೆಗೆ ಹೊಂದಿಕೊಂಡು ಇರುವ ಕೊಟ್ರಪ್ಪ ಸಜ್ಜನಶೆಟ್ರ ಇವರ ಜಮೀನಿನಲ್ಲಿ ಕಲ್ಲು ಪಿಚ್ಚಿಂಗ್ ಮತ್ತು ಭೂ ಅಭಿವೃದ್ಧಿ ಪಡಿಸುವುದು"** ತಂದೆ ಮಲ್ಲೇಶಪ್ಪ ಕ್ವಾರಡಿ ಇವರ ಹೆಸರಿನಲ್ಲಿ **"ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಎಡದಂಡೆ ಕಾಲುವೆಗೆ ಹೊಂದಿಕೊಂಡು ಇರುವ ಕೊಟ್ರಪ್ಪ ಸಜ್ಜನಶೆಟ್ರ ಇವರ ಜಮೀನಿನ ಹತ್ತಿರ ನೀರಾವರಿ ಕಾಲುವೆಗೆ ಸಿ.ಡಿ.ನಿರ್ಮಾಣ ಮಾಡುವುದು"** ಈ ಎರಡು ವೈಯಕ್ತಿಕ ಕಾಮಗಾರಿಗಳಿಗೆ 2018-19ರಲ್ಲಿ ತಲಾ 4.90 ಲಕ್ಷ ಮತ್ತು 3 ಲಕ್ಷಗಳ ಕ್ರಿಯಾ ಯೋಜನೆ ತಯಾರಿಸಿಕೊಂಡಿರುತ್ತಾರೆ. ಅಂದಾಜು ಪತ್ರಿಕೆಯನ್ನು ಶ್ರೀ ಕೆ.ವಿ.ಚಂದ್ರಯ್ಯ, ಎ.ಇ. ಏತ ನೀರಾವರಿ ಉಪವಿಭಾಗ, ಹಾನಗಲ್ ರವರು 2017-18ರಲ್ಲಿ ತಯಾರಿಸಿಕೊಂಡಿರುತ್ತಾರೆ. ಕ್ರಿಯಾ ಯೋಜನೆ ಆಗುವ ಪೂರ್ವದಲ್ಲಿಯೇ ಅಂದಾಜು ಪತ್ರಿಕೆ ತಯಾರಿಸಲಾಗಿದೆ.
18. ಮಾಸೂರು ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ರೇಣುಕಪ್ಪ ಸಜ್ಜನಶೆಟ್ರು ಇವರು ಅವರ ಅಣ್ಣನ ಹೆಸರಿನಲ್ಲಿರುವ ಭೂ ಅಭಿವೃದ್ಧಿ ಕಾಮಗಾರಿಯ ಎನ್.ಎಂ.ಆರ್. ನಂ.12146 ರಲ್ಲಿ 7 ದಿನ ಕೂಲಿಕೆಲಸ ನಿರ್ವಹಿಸಿದ ಬಗ್ಗೆ ನಮೂದಿಸಿರುತ್ತಾರೆ. ಕೂಲಿ ಹಣ ರೂ.1652/-ಗಳು ತಮ್ಮ ಖಾತೆಗೆ ಜಮಾ ಆದ ಬಗ್ಗೆ ಮತ್ತುಎನ್.ಎಂ.ಆರ್.ದಲ್ಲಿ ಅವರ ಹೆಸರಿನ ಮುಂದೆ ಮಾಡಿದ ಸಹಿ ತಮ್ಮದಲ್ಲ ಅಂತಾ ಹೇಳಿಕೆ ನೀಡಿರುತ್ತಾರೆ.
19. ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ರಘು ಚನ್ನಗಿರಿ ಇವರು ದಿ.10-11-2017, 14-07-2017, 07-12-2017,05-10-2017, 12-01-2018 ರಂದು ಒಟ್ಟು 5 ಬಿಲ್ಲುಗಳನ್ನು ನೀಡಿದ್ದು, ಸದರಿ ಬಿಲ್ಲಿನಲ್ಲಿ ಕ್ರಮವಾಗಿ ರೂ.48,640/-, ರೂ. 41,040/-, ರೂ.30400/-, ರೂ.34,960/-, ರೂ.36,480/-ಗಳನ್ನು ನಮೂದಿಸಿದ್ದು, ಪಿಡಿಓ ರವರು ಬಿಲ್ಲುಗಳಿಗೆ ಅನುಗುಣವಾಗಿ ಒಟ್ಟು ರೂ. 191520/-ಗಳನ್ನು ದಿ.08-06-2018 ರಂದು ಎಫ್‌ಟಿಓ ಮುಖಾಂತರ ಜಮಾ ಮಾಡಿರುತ್ತಾರೆ. ರಘು ಚನ್ನಗಿರಿ ಇವರು ನೀಡಿದ ಬಿಲ್ಲುಗಳಲ್ಲಿ ಸಪ್ಲೈ ಆಫ್ ಟ್ರಾನ್ಸಪೋರ್ಟೇಶನ್ ಅಂತಾ ಮಾತ್ರ ಬರೆಯಲಾಗಿದೆ. ಸದರಿ ಬಿಲ್ಲುಗಳನ್ನು ಇಂಜಿನಿಯರ್ ರವರು ದೃಢೀಕರಿಸಿರುವುದಿಲ್ಲ. ಆದರೆ ಸಪ್ಲೈಯರ್ ಶ್ರೀ ಡಿ.ಎಸ್. ಸಿದ್ದಲಿಂಗಪ್ಪನವರ ಅಂತಾ ಇಂಜಿನಿಯರ್ ರವರು ಎಫ್& ಎಫ್ ಬಿಲ್ಲುಗಳಲ್ಲಿ ಮತ್ತು ಎಂ.ಬಿ.ಯಲ್ಲಿ ಸ್ಪಷ್ಟವಾಗಿ ನಮೂದಿಸಿರುತ್ತಾರೆ.

20. ಈ ಕಾಮಗಾರಿಯಲ್ಲಿ ಕೂಲಿಕಾರರಿಗೆ ಒಟ್ಟು ರೂ.1,65,200/-ಗಳನ್ನು ಮತ್ತು ಸಾಮಗ್ರಿಗಾಗಿ ಒಟ್ಟು ರೂ.1,91,520/-ಗಳನ್ನು ಒಟ್ಟು ರೂ.3,56,720/-ಗಳನ್ನು ಪಿಡಿಓ ಮತ್ತು ಅಧ್ಯಕ್ಷರು ಖರ್ಚು ಮಾಡಿರುತ್ತಾರೆ.
21. ಈ ಕಾಮಗಾರಿಗಳಲ್ಲಿ ತಗೆಯಲಾದ ಪೋಟೋಗಳನ್ನು ಗಮನಿಸಿದಾಗ ಒಬ್ಬನೇ ಒಬ್ಬ ಕೂಲಿಕಾರನು ಕೆಲಸ ಮಾಡುತ್ತಿರುವ ದೃಶ್ಯವಿರುವುದಿಲ್ಲ. ಹತ್ತಿ ಬೆಳೆಯನ್ನು ಬೆಳದ ಜಮೀನಿಗೆ ಕೆರೆಯ ಮಣ್ಣನ್ನು ಹೆರಿಸಿ, ವಾಹನಗಳಿಂದ ಹರಡಿಸಿದಂತೆ ಕಂಡುಬರುತ್ತವೆ.
22. ಶ್ರೀ ರೇಣುಕಪ್ಪ ಸಜ್ಜನಶೆಟ್ರು ಇವರು ಅಣ್ಣನ ಹೆಸರಿನಲ್ಲಿರುವ ಜಮೀನಿನ ಹತ್ತಿರ ನೀರಾವರಿ ಕಾಲುವೆಗೆ ಸಿ.ಡಿ. ನಿರ್ಮಾಣ ಕಾಮಗಾರಿಯಲ್ಲಿ ಎನ್.ಎಂ.ಆರ್. ನಂ.12796 ರಲ್ಲಿ 7 ದಿನ, ಎನ್.ಎಂ.ಆರ್. ನಂ.13035 ರಲ್ಲಿ 7 ದಿನ, ಎನ್.ಎಂ.ಆರ್. ನಂ.13426 ರಲ್ಲಿ 7ದಿನ, ಎನ್.ಎಂ.ಆರ್. ನಂ.13950ರಲ್ಲಿ 7 ದಿನ ಕೂಲಿಕೆಲಸ ಮಾಡಿ ಒಟ್ಟು ರೂ. 6608/-ಗಳ ಕೂಲಿ ಮೊತ್ತದ ಬಗ್ಗೆ ಪಿಡಿಓ ರವರು ಎನ್.ಎಂ.ಆರ್.ದಲ್ಲಿ ನಮೂದಿಸಿರುತ್ತಾರೆ. ಸದರಿ ಎನ್.ಎಂ.ಆರ್.ಗಳಲ್ಲಿ ತಮ್ಮ ಹೆಸರಿನ ಮುಂದೆ ಇರುವ ಸಹಿಗಳು ತಮ್ಮವಲ್ಲ ಮತ್ತು ತಮ್ಮ ಬ್ಯಾಂಕಿಗೆ ಎಫ್‌ಟಿಓ ಮುಖಾಂತರ ಕೂಲಿ ಹಣ ಜಮಾ ಆಗಿರುತ್ತದೆ ಅಂತಾ ರೇಣುಕಪ್ಪ ಇವರ ಹೇಳಿಕೆಯನ್ನು ನೀಡಿರುತ್ತಾರೆ.
23. ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ರಘು ಚನ್ನಗಿರಿ ಇವರು ದಿ.15-02-2018 ರಂದು ಬಿಲ್ ನಂ.8 ರಲ್ಲಿ ಸಪ್ಲೈ ಆಫ್ ಟ್ರಾನ್ಸ್‌ಪೋರ್ಟ ಅಂತಾ ನಮೂದಿಸಿ ರೂ.31,920/-ಗಳ ಬಿಲ್ಲನ್ನು ಪಿಡಿಓ/ಅಧ್ಯಕ್ಷರಿಗೆ ನೀಡಿರುತ್ತಾರೆ. ಸಪ್ಲೈಯರ ರವರ ಹೆಸರನ್ನು ಬರೆಯದೇ ಇಂಜಿನಿಯರ್ ರವರು ಮೆಟಲ್, ಸ್ಯಾಂಡ್, ಸಿಮೆಂಟ್ ಸಾಗಾಟ ಮಾಡಿದ ಮೊತ್ತ ರೂ.31,920/-ಗಳಲ್ಲಿ ರಾಯಲ್ಟಿ ರೂ. 1487/-ಗಳನ್ನು ಪಡೆದುಕೊಳ್ಳುವಂತೆ ನಮೂದಿಸಿ ಎಫ್&ಎಫ್ ಬಿಲ್ಲು ತಯಾರಿಸಿದ್ದು ಇರುತ್ತದೆ. ಪಿಡಿಓ ರವರು ಸದರಿ ಬಿಲ್ಲಿನ ಮೊತ್ತದಲ್ಲಿ ರಾಯಲ್ಟಿಯನ್ನು ಕಡಿತ ಮಾಡಿಕೊಳ್ಳದೇ ರೂ.31,920/-ಗಳನ್ನು ರಘು ಚನ್ನಗಿರಿ ಇವರ ಬ್ಯಾಂಕ್ ಖಾತೆಗೆ ಎಫ್‌ಟಿಓ ಮುಖಾಂತರ ಜಮಾ ಮಾಡಿರುತ್ತಾರೆ.
24. ಬಾಲಾಜಿ ಟ್ರೇಡರ್ಸ್, ಮಾಸೂರು ಇವರು ದಿ.15-02-2018 ರಂದು 75 ಚೀಲ ಸಿಮೆಂಟ್, ದಿ.11-01-18 ರಂದು 75 ಚೀಲ ಸಿಮೆಂಟ್ ಪೂರೈಕೆ ಮಾಡಿದ ಬಗ್ಗೆ ಪ್ರತ್ಯೇಕವಾಗಿ ತಲಾ 25,500/-ಗಳ ಬಿಲ್ಲುಗಳನ್ನು ಪಿಡಿಓ ಮತ್ತು ಅಧ್ಯಕ್ಷರಿಗೆ ಸಲ್ಲಿಸಿಕೊಂಡಿದ್ದು, ಸಪ್ಲೈಯರ ರವರ ಹೆಸರ ಮುಂದೆ

ಸಿಮೆಂಟ್ ಬಿಲ್ ಅಂತಾ ಬರೆದು, ಐಟಂ, ಕ್ವಾಟಿಟಿ, ದರ ಮತ್ತು ಮೊತ್ತದ ಬಗ್ಗೆ ಏನನ್ನು ಬರೆಯದೇ ಇಂಜಿನಿಯರ್ ರವರು ಎಫ್&ಎಫ್ ಬಿಲ್ಲು ಬರೆದು, ಸಹಿ ಮಾಡಿದ್ದು, ಸದರಿ ಖಾಲಿ ಎಫ್&ಎಫ್ ಬಿಲ್ಲಿಗೆ ಪಿಡಿಓ ಮತ್ತು ಅಧ್ಯಕ್ಷರು ಸಹಿ ಮಾಡಿರುತ್ತಾರೆ. ಪಿಡಿಓ ರವರು ಸದರಿ ಬಿಲ್ಲಿನ ಮೊತ್ತವನ್ನು ರೂ.51000/-ಗಳನ್ನು ಬಾಲಾಜಿ ಟ್ರೇಡರ್ಸ್ ಇವರ ಬ್ಯಾಂಕ್ ಖಾತೆಗೆ ಎಫ್‌ಟಿಓ ಮುಖಾಂತರ ಜಮಾ ಮಾಡಿರುತ್ತಾರೆ.

25. ವಿ.ಎನ್.ಟ್ರೇಡರ್ಸ್, ಮಾಸೂರು ಇವರು ದಿ.15-01-2018 ರಂದು 500 ಕೆ.ಜಿ. ಬಿ.ಎಂ.ಎಂ. ಸ್ಟೀಲ್ ಪೂರೈಕೆ ಮಾಡಿದ ಬಗ್ಗೆ ಜಿಎಸ್‌ಟಿ ಸೇರಿ ರೂ.25370/-ಗಳ ಬಿಲ್ಲನ್ನು ಪಿಡಿಓ ಮತ್ತು ಅಧ್ಯಕ್ಷರಿಗೆ ಸಲ್ಲಿಸಿಕೊಂಡಿದ್ದು, ಸಪ್ಲೈಯರ ರವರ ಹೆಸರ ಮುಂದೆ ಸ್ಟೀಲ್ ಬಿಲ್ ಅಂತಾ ಬರೆದು, ಐಟಂ, ಕ್ವಾಟಿಟಿ, ದರ ಮತ್ತು ಮೊತ್ತದ ಬಗ್ಗೆ ಏನನ್ನು ಬರೆಯದೇ ಇಂಜಿನಿಯರ್ ರವರು ಎಫ್&ಎಫ್ ಬಿಲ್ಲು ಬರೆದು, ಸಹಿ ಮಾಡಿದ್ದು, ಸದರಿ ಖಾಲಿ ಎಫ್&ಎಫ್ ಬಿಲ್ಲಿಗೆ ಅಧ್ಯಕ್ಷರು ಸಹಿ ಮಾಡಿರುತ್ತಾರೆ. ಪಿಡಿಓ ರವರು ಸದರಿ ಬಿಲ್ಲಿನ ಮೊತ್ತವನ್ನು ರೂ.25370/-ಗಳನ್ನು ವಿ.ಎನ್.ಟ್ರೇಡರ್ಸ್ ಇವರ ಬ್ಯಾಂಕ್ ಖಾತೆಗೆ ಎಫ್‌ಟಿಓ ಮುಖಾಂತರ ಜಮಾ ಮಾಡಿರುತ್ತಾರೆ.

26. ಈ ಕಾಮಗಾರಿಯಲ್ಲಿ ಕೂಲಿಕಾರರಿಗೆ ಒಟ್ಟು ರೂ.97,468/-ಗಳನ್ನು ಮತ್ತು ಸಾಮಗ್ರಿಗಾಗಿ ಒಟ್ಟು ರೂ.1,08,290/-ಗಳನ್ನು ಒಟ್ಟು ರೂ.2,05,758/-ಗಳನ್ನು ಪಿಡಿಓ ಮತ್ತು ಅಧ್ಯಕ್ಷರು ಖರ್ಚು ಮಾಡಿರುತ್ತಾರೆ.

27. ಈ ಕಾಮಗಾರಿಗಳಲ್ಲಿ ತಗೆಯಲಾದ ಪೋಟೋಗಳನ್ನು ಗಮನಿಸಿದಾಗ 4-5 ಕೂಲಿಕಾರರು ಕೆಲಸ ಮಾಡುತ್ತಿರುವ ದೃಶ್ಯವಿರುತ್ತವೆ. ಸದರಿ ಸಿ.ಡಿ.ಯನ್ನು ಶ್ರೀ ಕೋಟ್ರಪ್ಪ ಸಜ್ಜನಶೆಟ್ರು ಇವರ ಹೋಲಕ್ಕೆ ಹೋಗಲು ಮಾತ್ರ ಮಾಡಿದ್ದು ಅಂತಾ ಮೇಲ್ನೋಟಕ್ಕೆ ಕಂಡುಬರುತ್ತದೆ.

28. ಶ್ರೀ ರಾಜು ಕುರವತ್ತೆಪ್ಪ ಸುಣಗಾರ, ಅಧ್ಯಕ್ಷರು ಗ್ರಾಮ ಪಂಚಾಯತಿ ಮಾಸೂರು ಇವರು ತಮ್ಮ ಮತ್ತು ತಮ್ಮ ಸಹೋದರರ ಹೆಸರಿನಲ್ಲಿ 2017-18ರಲ್ಲಿ ಒಟ್ಟು 3 ವೈಯಕ್ತಿಕ ಕಾಮಗಾರಿಗಳನ್ನು ಕೈಕೊಂಡಿರುತ್ತಾರೆ.

29. ಶ್ರೀ ರಾಜು ಕುರವತ್ತೆಪ್ಪ ಸುಣಗಾರ ಇವರು ತಮ್ಮ ಹೆಸರಿನಲ್ಲಿ 2018-19ರಲ್ಲಿ ಹೆಚ್ಚುವರಿ ಕ್ರಿಯಾ ಯೋಜನೆಯಲ್ಲಿ **"ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಬಲದಂಡೆ ಕಾಲುವೆಗೆ ಹೊಂದಿಕೊಂಡು ಇರುವ ರಾಜು ಕುರವತ್ತೆಪ್ಪ ಸುಣಗಾರ ಇವರ ಜಮೀನಿನಲ್ಲಿ ಕಲ್ಲು ಪಿಚ್ಚಿಂಗ್ ಮತ್ತು ಭೂ ಸಮತಟ್ಟು ಮಾಡುವುದು"** 4.50 ಲಕ್ಷಗಳ ಅಂದಾಜು ಮೊತ್ತದ ಕಾಮಗಾರಿಯನ್ನು ಹಾಕಿಕೊಂಡಿದ್ದು, ಸದರಿ ಕಾಮಗಾರಿಗೆ 2017-18ರಲ್ಲಿಯೇ

ಶ್ರೀ ಕೆ.ವಿ.ಚಂದ್ರಯ್ಯ, ಎ.ಇ., ಏತನೀರಾವರಿ ಉಪವಿಭಾಗ, ಹಾನಗಲ್ ರವರು 4.50 ಲಕ್ಷಗಳ ಅಂದಾಜು ಪತ್ರಿಕೆಯನ್ನು ತಯಾರಿಸಿಕೊಂಡಿರುತ್ತಾರೆ. ಇಂಜಿನಿಯರ್ ರವರು ಕ್ರಿಯಾ ಯೋಜನೆ ಆಗುವ ಪೂರ್ವದಲ್ಲಿಯೇ ಅಂದಾಜು ಪತ್ರಿಕೆಯನ್ನು ತಯಾರಿಸಿಕೊಂಡಿರುತ್ತಾರೆ.

30. ಸಾಗಾಣಿಕೆ ಚಾರ್ಜಗಾಗಿ ಶ್ರೀ ರಮೇಶ ಕೆ.ಜೆ. ರವರು ಸಲ್ಲಿಸಿಕೊಂಡ ದರಪಟ್ಟಿಯನ್ನು ಪಿಡಿಓ ರವರು ಒಪ್ಪಿಕೊಂಡು, ಅವರಿಗೆ ಸಾಗಾಣಿಕೆ ಚಾರ್ಜಗಾಗಿ ಕಾರ್ಯಾದೇಶ ನೀಡಿದ್ದು, ಅದರಂತೆ ರಮೇಶ ಕೆ.ಜೆ. ಸಪ್ಲೈ ಆಫ್ ಟ್ರಾನ್ಸಪೋರ್ಟ ಮಾಡಿದ ಬಗ್ಗೆ ರೂ.25,840/-ಗಳ ಬಿಲ್ ನಂ.49 ದಿ.22-11-2018 ಮತ್ತು ರೂ.42,560/-ಗಳ ಬಿಲ್ ನಂ.20 ದಿ.04-09-2018 ನೇದ್ದವುಗಳನ್ನು ಪಿಡಿಓ/ಅಧ್ಯಕ್ಷರಿಗೆ ಸಲ್ಲಿಸಿಕೊಂಡಿದ್ದು, ಸಪ್ಲೈಯರ್ ಹೆಸರು ಅತಾವುಲ್ಲಾ ಬಡಗಿ ಸಾ:ಮಾಸೂರು ಅಂತಾ ಎಫ್&ಎಫ್ ಬಿಲ್ಲಿಗಳಲ್ಲಿ ಇಂಜಿನಿಯರ್ ರವರು ಬರೆರುತ್ತಾರೆ. ಆದರೆ ಪಿಡಿಓ ರವರು ಇಂಜಿನಿಯರ್ ರವರು ಬರೆದ ಸಪ್ಲೈಯರ್ ಹೆಸರಿನಲ್ಲಿ ಬಿಲ್ಲುಗಳ ಮೊತ್ತವನ್ನು ಪಾವತಿಸದೇ ರಮೇಶ ಕೆ.ಜೆ. ಇವರ ಹೆಸರಿನಲ್ಲಿ ಪಾವತಿಸಲು ಕ್ರಮ ಕೈಕೊಂಡಿದ್ದು, ಆದರೆ ಇನ್ನೂ ಬಿಲ್ಲಿನ ಮೊತ್ತ ಪಾವತಿಯಾಗಿರುವುದಿಲ್ಲ.

31. ಸಪ್ಲೈ ಆಫ್ ಟ್ರಾನ್ಸ್‌ಪೋರ್ಟ ಗಾಗಿ ಗ್ರಾಮ ಪಂಚಾಯತಿ ಸದಸ್ಯರಾಗಿರುವ ಶ್ರೀ ರಘು ಚನ್ನಗಿರಿ ಇವರು ರೂ.45,600/-ಗಳ ಮೊತ್ತದ ಬಿಲ್ ನಂ.23 ದಿ.14-06-2018 ಮತ್ತು ರೂ.57,760/-ಗಳ ಮೊತ್ತದ ಬಿಲ್ ನಂ.22 ದಿ.30-05-2018 ನೇದ್ದವುಗಳನ್ನು ಪಿಡಿಓ ಮತ್ತು ಅಧ್ಯಕ್ಷರಿಗೆ ವಿಳಾಸಿಸಿ ನೀಡಿದ್ದು, ಪಿಡಿಓ ರವರು ಸದರಿ ಬಿಲ್ಲುಗಳಿಗೆ ಇಂಜಿನಿಯರ್ ರವರಿಂದ ದೃಢೀಕರಣ ಪಡೆದುಕೊಳ್ಳದೇ ರಘು ಚನ್ನಗಿರಿ ಇವರ ಖಾತೆಗೆ ಸದರಿ ಬಿಲ್ಲುಗಳ ಒಟ್ಟು ಮೊತ್ತ ರೂ.103360/-ಗಳನ್ನು ಎಫ್‌ಟಿಓ ಮುಖಾಂತರ ಜಮಾ ಮಾಡಿರುತ್ತಾರೆ.

32. ಈ ಕಾಮಗಾರಿಯಲ್ಲಿ ಕೂಲಿಕಾರರಿಗೆ ಒಟ್ಟು ರೂ.2,64,299/-ಗಳನ್ನು ಮತ್ತು ಸಾಮಗ್ರಿಗಾಗಿ ಒಟ್ಟು ರೂ.1,03,360/-ಗಳನ್ನು ಒಟ್ಟು ರೂ.3,67,659/-ಗಳನ್ನು ಪಿಡಿಓ ಮತ್ತು ಅಧ್ಯಕ್ಷರು ಖರ್ಚು ಮಾಡಿರುತ್ತಾರೆ. ಇನ್ನೂ ರಮೇಶ ಕೆ.ಜೆ. ರವರು ನೀಡಿದ ಬಿಲ್ಲುಗಳ ಮೊತ್ತ ರೂ. 68400/-ಗಳನ್ನು ಪಾವತಿಸುವುದು ಬಾಕಿ ಇರುತ್ತದೆ.

33. ಈ ಕಾಮಗಾರಿಗಳಲ್ಲಿ ತಗೆಯಲಾದ ಪೋಟೋಗಳನ್ನು ಗಮನಿಸಿದಾಗ ಟ್ರ್ಯಾಕ್ಟರ್‌ಗಳಿಂದ ತಂದ ಜಮೀನಿನಲ್ಲಿ ಗುಡ್ಡೆ ಹಾಕಿದ ಮಣ್ಣನ್ನು 20-25 ಕೂಲಿಕಾರರು ಹರಡುತ್ತಿರುವ ದೃಶ್ಯವಿರುತ್ತವೆ. ಸ್ಥಳ ಪರಿಶೀಲನೆ ಕಾಲಕ್ಕೆ

ಸ್ಥಳದಲ್ಲಿ ಹಾಜರಿದ್ದ ಅಧ್ಯಕ್ಷರಾದ ರಾಜು ಸುಣಗಾರ ಇವರಿಗೆ ವಿಚಾರಿಸಿದಾಗ ಸದರಿ ಜಮೀನಿನಲ್ಲಿ 7 ರಿಂದ 8 ತಿಂಗಳ ಹಿಂದೆ ನಾಟಿ ಮಾಡಿದ ಅಡಿಕೆ ಗಿಡಗಳು ಇರುತ್ತವೆ ಅಂತಾ ತಿಳಿಸಿದರು. ಕಾಮಗಾರಿಯ ಕಡತದಲ್ಲಿರುವ ಫೋಟೋಗಳಿಗೂ, ಪಿಡಿಓ ರವರು ತೋರಿಸಿದ ಕಾಮಗಾರಿ ನಡೆದ ಸ್ಥಳ ಮತ್ತು ಸ್ಥಳದಲ್ಲಿರುವ ಅಡಿಕೆ ಬೆಳೆ ಮತ್ತು ಕಾಮಗಾರಿ ಮುಕ್ತಾಯವಾದ ದಿನಾಂಕ ಇವು ಒಂದಕ್ಕೊಂದು ಹೊಂದಾಣಿಕೆ ಇರುವುದಿಲ್ಲ. ಒಂದು ಫೋಟೋದಲ್ಲಿ ಟ್ರ್ಯಾಕ್ಟರ್‌ದಿಂದ ಮಣ್ಣನ್ನು ಸಮತಟ್ಟು ಮಾಡುತ್ತಿರುವ ದೃಶ್ಯವಿರುತ್ತದೆ.

34. ಅಧ್ಯಕ್ಷರಾದ ರಾಜು ಸುಣಗಾರ ಇವರು 2016-17ರಲ್ಲಿ ಮದಗ ಮಾಸೂರು ಕೆರೆಯ ಬಲದಂಡೆ ಕಾಲುವೆಗೆ ಹೊಂದಿಕೊಂಡಂತೆ ಇರುವ ತಮ್ಮ ಜಮೀನ ಸರ್ವೆನಂ.108 ರಲ್ಲಿ ಎನ್.ಆರ್.ಇ.ಜಿ. ಯೋಜನೆಯಲ್ಲಿ ಭೂ ಅಭಿವೃದ್ಧಿ ಕಾಮಗಾರಿಯನ್ನು ಕೊಂಡಿರುತ್ತಾರೆ. ಈ ಕಾಮಗಾರಿಗಾಗಿ ಕೂಲಿ ಹಣ ರೂ.2,14,144/- ಮತ್ತು ಸಾಮಗ್ರಿ ರೂ.1,33,488/- ಒಟ್ಟು ರೂ.3,47,632/- ಗಳನ್ನು ಖರ್ಚು ಮಾಡಿರುತ್ತಾರೆ.

35. ಶ್ರೀ ರಾಜು ಕುರವತ್ತೆಪ್ಪ ಸುಣಗಾರ ಇವರು ತಮ್ಮ ಸಹೋದರ ಚಂದ್ರಶೇಖರ ಸುಣಗಾರ ಇವರ ಹೆಸರಿನಲ್ಲಿ 2018-19ರಲ್ಲಿ ಹೆಚ್ಚುವರಿ ಕ್ರಿಯಾ ಯೋಜನೆಯಲ್ಲಿ **"ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಬಲದಂಡೆ ಕಾಲುವೆಗೆ ಹೊಂದಿಕೊಂಡು ಇರುವ ಚಂದ್ರಶೇಖರ ಸುಣಗಾರ ಇವರ ಜಮೀನಿನಲ್ಲಿ ಭೂ ಅಭಿವೃದ್ಧಿ ಪಡಿಸುವುದು"** 4.50 ಲಕ್ಷಗಳ ಅಂದಾಜು ಮೊತ್ತದ ಕಾಮಗಾರಿಯನ್ನು ಹಾಕಿಕೊಂಡಿದ್ದು, ಸದರಿ ಕಾಮಗಾರಿಗೆ 2017-18ರಲ್ಲಿಯೇ ಶ್ರೀ ಕೆ.ವಿ.ಚಂದ್ರಯ್ಯ, ಎ.ಇ., ಏತನೀರಾವರಿ ಉಪವಿಭಾಗ, ಹಾನಗಲ್ ರವರು 4.50 ಲಕ್ಷಗಳ ಅಂದಾಜು ಪತ್ರಿಕೆಯನ್ನು ತಯಾರಿಸಿಕೊಂಡಿರುತ್ತಾರೆ. ಇಂಜಿನಿಯರ್ ರವರು ಕ್ರಿಯಾ ಯೋಜನೆ ಆಗುವ ಪೂರ್ವದಲ್ಲಿಯೇ ಅಂದಾಜು ಪತ್ರಿಕೆಯನ್ನು ತಯಾರಿಸಿಕೊಂಡಿರುತ್ತಾರೆ.

36. ಸಾಗಾಣಿಕೆ ಚಾರ್ಜಗಾಗಿ ಗ್ರಾಮ ಪಂಚಾಯತಿ ಸದಸ್ಯರಾಗಿರುವ ಶ್ರೀ ರಘು ಚನ್ನಗಿರಿ ಇವರು ಸಲ್ಲಿಸಿಕೊಂಡ ದರಪಟ್ಟಿಯನ್ನು ಪಿಡಿಓ ರವರು ಒಪ್ಪಿಕೊಂಡು, ಅವರಿಗೆ ಸಾಗಾಣಿಕೆ ಚಾರ್ಜಗಾಗಿ ಕಾರ್ಯಾದೇಶ ನೀಡಿದ್ದು, ಅದರಂತೆ ಟ್ರ್ಯಾಕ್ಟರ್ ಬಾಡಿಗೆ ರೂ.59,280/-ಗಳು ಕೋಟೇಶನ್ ಬಿಲ್ ನಂ.418 ದಿ.30-05-2018, ಟ್ರ್ಯಾಕ್ಟರ್ ಬಾಡಿಗೆ ರೂ.59,280/-ಗಳ ಕೋಟೇಶನ್ ಬಿಲ್ ನಂ. ಇಲ್ಲ ದಿ.14-06-2018 ರಂದು ಗ್ರಾಮ

(13)

ಇವರ ಜಮೀನಿನಲ್ಲಿ ಭೂ ಅಭಿವೃದ್ಧಿ ಪಡಿಸುವುದು" 4.50 ಲಕ್ಷಗಳ ಅಂದಾಜು ಮೊತ್ತದ ಕಾಮಗಾರಿಯನ್ನು ಹಾಕಿಕೊಂಡಿದ್ದು, ಸದರಿ ಕಾಮಗಾರಿಗೆ 2017–18ರಲ್ಲಿಯೇ ಶ್ರೀ ಕೆ.ವಿ.ಚಂದ್ರಯ್ಯ, ಎ.ಇ., ಏತನೀರಾವರಿ ಉಪವಿಭಾಗ, ಹಾನಗಲ್ ರವರು 4.50 ಲಕ್ಷಗಳ ಅಂದಾಜು ಪತ್ರಿಕೆಯನ್ನು ತಯಾರಿಸಿಕೊಂಡಿರುತ್ತಾರೆ. ಇಂಜಿನಿಯರ್ ರವರು ಕ್ರಿಯಾ ಯೋಜನೆ ಆಗುವ ಪೂರ್ವದಲ್ಲಿಯೇ ಅಂದಾಜು ಪತ್ರಿಕೆಯನ್ನು ತಯಾರಿಸಿಕೊಂಡಿರುತ್ತಾರೆ.

41. ಸಾಗಾಣಿಕೆ ಚಾರ್ಜಗಾಗಿ ಶ್ರೀ ರಮೇಶ ಕೆ.ಜೆ. ಇವರು ಸಲ್ಲಿಸಿಕೊಂಡ ದರಪಟ್ಟಿಯನ್ನು ಪಿಡಿಓ ರವರು ಒಪ್ಪಿಕೊಂಡು, ಅವರಿಗೆ ಸಾಗಾಣಿಕೆ ಚಾರ್ಜಗಾಗಿ ಕಾರ್ಯಾದೇಶ ನೀಡಿದ್ದು, ಅದರಂತೆ ಸಪ್ಲೈ ಟ್ರಾನ್ಸಪೋರ್ಟ ಬಿಲ್ ಮೊತ್ತ ರೂ.31,920/–ಗಳ ಬಿಲ್ ನಂ.212 ದಿ.30–09–2018, ಬಿಲ್ ಮೊತ್ತ ರೂ.27,360/–ಗಳ ಬಿಲ್ ನಂ. 43 ದಿ.22–11–2018 ರಂದು ಗ್ರಾಮ ಪಂಚಾಯತಿಗೆ ಸಲ್ಲಿಸಿಕೊಂಡಿರುತ್ತಾರೆ. ಪಿಡಿಓ ರವರು ಸದರಿ ಬಿಲ್ಲುಗಳಿಗೆ ಇಂಜಿನಿಯರ್‌ರವರಿಂದ ದೃಢೀಕರಣ ಮಾಡಿಸಿಕೊಳ್ಳದೇ ಬಿಲ್ಲುಗಳಲ್ಲಿ ನಮೂದಿಸಿದ ಮೊತ್ತವನ್ನು ಎಫ್‌ಟಿಓ ಮುಖಾಂತರ ಜಮಾ ಮಾಡಲು ಕ್ರಮ ಕೈಕೊಂಡಿದ್ದು, ಆದರೆ ಸದರಿ ಬಿಲ್ಲುಗಳ ಒಟ್ಟು ಮೊತ್ತ ರೂ.59,280/–ಗಳು ಇನ್ನೂ ಜಮಾ ಆಗಿರುವುದಿಲ್ಲ.

42. ಗ್ರಾಮ ಪಂಚಾಯತಿ ಸದಸ್ಯರಾಗಿರುವ ರಘು ಚನ್ನಗಿರಿ ಇವರು ಸಪ್ಲೈ ಟ್ರಾನ್ಸಪೋರ್ಟ ಬಿಲ್ಲಿನ ಮೊತ್ತ ರೂ.56,240/– ಬಿಲ್ ನಂ.18 ದಿ.14–06–2018 ಮತ್ತು ಬಿಲ್ಲಿನ ಮೊತ್ತ ರೂ.59,280/– ಬಿಲ್ ನಂ.17 ದಿ.30–05–2018 ನೇದ್ದವುಗಳನ್ನು ಪಿಡಿಓ/ಅಧ್ಯಕ್ಷರಿಗೆ ಸಲ್ಲಿಸಿಕೊಂಡಿದ್ದು, ಸಪ್ಲೈಯರ್ ಹೆಸರು ಅತಾವುಲ್ಲಾ ಬಡಗಿ ಸಾ:ಮಾಸೂರು ಅಂತಾ ಎಫ್&ಎಫ್ ಬಿಲ್ಲಿಗಳಲ್ಲಿ ಇಂಜಿನಿಯರ್ ರವರು ಬರೆರುತ್ತಾರೆ. ಆದರೆ ಪಿಡಿಓ ರವರು ಇಂಜಿನಿಯರ್ ರವರು ಬರೆದ ಸಪ್ಲೈಯರ್ ಹೆಸರಿನಲ್ಲಿ ಬಿಲ್ಲುಗಳ ಮೊತ್ತವನ್ನು ಪಾವತಿಸದೇ ಗ್ರಾಮ ಪಂಚಾಯತಿ ಸದಸ್ಯರಾಗಿರುವ ರಘು ಚನ್ನಗಿರಿ ಇವರ ಬ್ಯಾಂಕ್ ಖಾತೆಗೆ ಎಫ್‌ಟಿಓ ಮುಖಾಂತರ ಒಟ್ಟು ರೂ.1,15,520/–ಗಳನ್ನು ಜಮಾ ಮಾಡಿರುತ್ತಾರೆ.

43. ಈ ಕಾಮಗಾರಿಯಲ್ಲಿ ಕೂಲಿಕಾರರಿಗೆ ಒಟ್ಟು ರೂ. 2,66,042/–ಗಳನ್ನು ಮತ್ತು ಸಾಮಗ್ರಿಗಾಗಿ ಒಟ್ಟು ರೂ.1,15,520/–ಗಳನ್ನು ಒಟ್ಟು ರೂ.3,81,562/–ಗಳನ್ನು ಪಿಡಿಓ ಮತ್ತು ಅಧ್ಯಕ್ಷರು ಖರ್ಚು ಮಾಡಿರುತ್ತಾರೆ. ಇನ್ನೂ ರಮೇಶ

ಪಂಚಾಯತಿಗೆ ಸಲ್ಲಿಸಿಕೊಂಡಿರುತ್ತಾರೆ. ಸಪ್ಲೈಯರ್ ಹೆಸರು ಅತಾವುಲ್ಲಾ ಬಡಗಿ ಸಾ:ಮಾಸೂರು ಅಂತಾ ಎಫ್&ಎಫ್ ಬಿಲ್ಲಿಗಳಲ್ಲಿ ಇಂಜಿನಿಯರ್ ರವರು ಬರೆರುತ್ತಾರೆ. ಆದರೆ ಪಿಡಿಓ ರವರು ಇಂಜಿನಿಯರ್ ರವರು ಬರೆದ ಸಪ್ಲೈಯರ್ ಹೆಸರಿನಲ್ಲಿ ಬಿಲ್ಲುಗಳ ಮೊತ್ತವನ್ನು ಪಾವತಿಸದೇ ಗ್ರಾಮ ಪಂಚಾಯತಿ ಸದಸ್ಯರಾಗಿರುವ ರಘು ಚನ್ನಗಿರಿ ಇವರ ಬ್ಯಾಂಕ್ ಖಾತೆಗೆ ಎಫ್‌ಟಿಓ ಮುಖಾಂತರ ಒಟ್ಟು ರೂ.1,18,560/-ಗಳನ್ನು ಜಮಾ ಮಾಡಿರುತ್ತಾರೆ.

37. ಸಾಗಾಣಿಕೆ ಚಾರ್ಜಗಾಗಿ ಶ್ರೀ ರಮೇಶ ಕೆ.ಜೆ. ಇವರು ಸಲ್ಲಿಸಿಕೊಂಡ ದರಪಟ್ಟಿಯನ್ನು ಪಿಡಿಓ ರವರು ಒಪ್ಪಿಕೊಂಡು, ಅವರಿಗೆ ಸಾಗಾಣಿಕೆ ಚಾರ್ಜಗಾಗಿ ಕಾರ್ಯಾದೇಶ ನೀಡಿದ್ದು, ಅದರಂತೆ ಸಪ್ಲೈ ಆಫ್ ಟ್ರಾನ್ಸ್‌ಪೋರ್ಟ ರೂ.30,400/-ಗಳ ಬಿಲ್ ನಂ.47 ದಿ.22-11-2018 ಮತ್ತು ರೂ.30,400/-ಗಳ ಬಿಲ್ ನಂ.18 ದಿ.04-09-2018 ನೇದ್ದವುಗನ್ನು ಗ್ರಾಮ ಪಂಚಾಯತಿಗೆ ಸಲ್ಲಿಸಿಕೊಂಡಿರುತ್ತಾರೆ. ಪಿಡಿಓ ರವರು ಸದರಿ ಬಿಲ್ಲುಗಳಿಗೆ ಇಂಜಿನಿಯರ್‌ರವರಿಂದ ದೃಢೀಕರಣ ಮಾಡಿಸಿಕೊಳ್ಳದೇ ಬಿಲ್ಲುಗಳಲ್ಲಿ ನಮೂದಿಸಿದ ಮೊತ್ತವನ್ನು ಎಫ್‌ಟಿಓ ಮುಖಾಂತರ ಜಮಾ ಮಾಡಲು ಕ್ರಮ ಕೈಕೊಂಡಿದ್ದು, ಆದರೆ ಸದರಿ ಬಿಲ್ಲುಗಳ ಒಟ್ಟು ಮೊತ್ತ ರೂ.60,800/-ಗಳು ಇನ್ನೂ ಜಮಾ ಆಗಿರುವುದಿಲ್ಲ.

38. ಈ ಕಾಮಗಾರಿಯಲ್ಲಿ ಕೂಲಿಕಾರರಿಗೆ ಒಟ್ಟು ರೂ.2,64,299/-ಗಳನ್ನು ಮತ್ತು ಸಾಮಗ್ರಿಗಾಗಿ ಒಟ್ಟು ರೂ.1,18,560/-ಗಳನ್ನು ಒಟ್ಟು ರೂ.3,82,859/-ಗಳನ್ನು ಪಿಡಿಓ ಮತ್ತು ಅಧ್ಯಕ್ಷರು ಖರ್ಚು ಮಾಡಿರುತ್ತಾರೆ. ಇನ್ನೂ ರಮೇಶ ಕೆ.ಜೆ. ರವರು ನೀಡಿದ ಬಿಲ್ಲುಗಳ ಮೊತ್ತ ರೂ. 60800/-ಗಳನ್ನು ಪಾವತಿಸುವುದು ಬಾಕಿ ಇರುತ್ತದೆ.

39. ಈ ಕಾಮಗಾರಿಗಳಲ್ಲಿ ತಗೆಯಲಾದ ಪೋಟೋಗಳನ್ನು ಗಮನಿಸಿದಾಗ ಟ್ರ್ಯಾಕ್ಟರ್‌ಗಳಿಂದ ತಂದು ಜಮೀನಿನಲ್ಲಿ ಗುಡ್ಡೆ ಹಾಕಿದ ಮಣ್ಣನ್ನು 4-5 ಕೂಲಿಕಾರರು ಹರಡುತ್ತಿರುವ ದೃಶ್ಯವಿರುತ್ತವೆ. ರಾಜು ಸುಣಗಾರ ಹೆಸರಿನ ಕಾಮಗಾರಿಯಲ್ಲಿ ಲಗತ್ತಿಸಿ ಪೋಟೋಗಳ ಮತ್ತು ಈ ಕಾಮಗಾರಿ ಕಡತದಲ್ಲಿ ಲಗತ್ತಿಸಿದ ಪೋಟೋಗಳು ಒಂದೇ ಇರುತ್ತವೆ.

40. ಶ್ರೀ ರಾಜು ಕುರವತ್ತೆಪ್ಪ ಸುಣಗಾರ ಇವರು ತಮ್ಮ ಸಹೋದರ ಮಲ್ಲಿಕಾರ್ಜುನ ಸುಣಗಾರ ಇವರ ಹೆಸರಿನಲ್ಲಿ 2018-19ರಲ್ಲಿ ಹೆಚ್ಚುವರಿ ಕ್ರಿಯಾ ಯೋಜನೆಯಲ್ಲಿ "**ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಬಲದಂಡೆ ಕಾಲುವೆಗೆ ಹೊಂದಿಕೊಂಡು ಇರುವ ಮಲ್ಲಿಕಾರ್ಜುನ ಸುಣಗಾರ**

ಕೆ.ಜೆ. ರವರು ನೀಡಿದ ಬಿಲ್ಲುಗಳ ಮೊತ್ತ ರೂ. 59,280/-ಗಳನ್ನು ಪಾವತಿಸುವುದು ಬಾಕಿ ಇರುತ್ತದೆ.

44. ಈ ಕಾಮಗಾರಿಗಳಲ್ಲಿ ತೆಗೆಯಲಾದ ಪೋಟೋಗಳನ್ನು ಗಮನಿಸಿದಾಗ ಟ್ರ್ಯಾಕ್ಟರ್‌ಗಳಿಂದ ತಂದು ಜಮೀನಿನಲ್ಲಿ ಗುಡ್ಡೆ ಹಾಕಿದ ಮಣ್ಣನ್ನು 4-5 ಕೂಲಿಕಾರರು ಹರಡುತ್ತಿರುವ ದೃಶ್ಯವಿರುತ್ತವೆ. ರಾಜು ಸುಣಗಾರ ಹೆಸರಿನ ಕಾಮಗಾರಿಯಲ್ಲಿ ಲಗತ್ತಿಸಿ ಪೋಟೋಗಳ ಮತ್ತು ಈ ಕಾಮಗಾರಿ ಕಡತದಲ್ಲಿ ಲಗತ್ತಿಸಿದ ಪೋಟೋಗಳು ಒಂದೇ ಇರುತ್ತವೆ.

45. ಮದಗ ಮಾಸೂರು ಕೆರೆಯ ಬಲದಂಡೆ ಕಾಲುವೆಗೆ ಹೊಂದಿಕೊಂಡಂತೆ ಇರುವ ಜಮೀನ ಸರ್ವೆನಂ.108 ರಲ್ಲಿ ಎನ್.ಆರ್.ಇ.ಜಿ. ಯೋಜನೆಯಲ್ಲಿ 2016-17ರಲ್ಲಿ ಭೂ ಅಭಿವೃದ್ಧಿ ಕಾಮಗಾರಿಯನ್ನು ಕೊಂಡಿರುತ್ತಾರೆ. ಈ ಕಾಮಗಾರಿಗಾಗಿ ಕೂಲಿ ಹಣ ರೂ.2,14,144/- ಮತ್ತು ಸಾಮಗ್ರಿ ರೂ.1,33,488/- ಒಟ್ಟು ರೂ.3,47,632/-ಗಳನ್ನು ಖರ್ಚು ಮಾಡಿರುತ್ತಾರೆ. ಪುನಃ 2017-18ರಲ್ಲಿ ಎನ್.ಆರ್.ಇ.ಜಿ. ಯೋಜನೆಯಲ್ಲಿ ಭೂ ಅಭಿವೃದ್ಧಿ ಕಾಮಗಾರಿಯನ್ನು ಕೈಕೊಂಡಿರುತ್ತಾರೆ.

46. ಹಿರೇಕೆರೂರು ತಾಲ್ಲೂಕಿನ ಖಂಡೇಬಾಗೂರು ಗ್ರಾಮ ರಿ.ಸ.ನಂ. 107/1ಅ ಕ್ಷೇತ್ರ 1 ಎಕರೆ 01 ಗುಂಟೆ, ಖಂಡೇಬಾಗೂರು ಗ್ರಾಮ ರಿ.ಸ.ನಂ. 108/1 ಕ್ಷೇತ್ರ 3 ಎಕರೆ 20 ಗುಂಟೆ, ಖಂಡೇಬಾಗೂರು ಗ್ರಾಮ ರಿ.ಸ.ನಂ. 108/2 ಕ್ಷೇತ್ರ 3 ಎಕರೆ 06 ಗುಂಟೆ, ಖಂಡೇಬಾಗೂರು ಗ್ರಾಮ ರಿ.ಸ.ನಂ. 107/2 ಕ್ಷೇತ್ರ 3 ಎಕರೆ 02 ಗುಂಟೆ, ಖಂಡೇಬಾಗೂರು ಗ್ರಾಮ ರಿ.ಸ.ನಂ. 107/ಕ ಕ್ಷೇತ್ರ 1 ಎಕರೆ ಒಟ್ಟು ಸುಮಾರ 11 ಎಕರೆ 29 ಗುಂಟೆ ಜಮೀನುಗಳು ಮಾಸೂರು ಗ್ರಾಮದ 1) ಶ್ರೀ ಮಲ್ಲಿಕಾರ್ಜುನ ಕುರವತ್ತೆಪ್ಪ ಸುಣಗಾರ 2) ಶ್ರೀ ಚಂದ್ರಶೇಖರ ಕುರವತ್ತೆಪ್ಪ ಸುಣಗಾರ ಮತ್ತು 3) ಶ್ರೀ ರಾಜು ಕುರವತ್ತೆಪ್ಪ ಸುಣಗಾರ ಇವರುಗಳ ಹೆಸರಿನಲ್ಲಿರುತ್ತವೆ. ಹಾಗಾಗೀ ಇವರು ಸಣ್ಣ ಮತ್ತು ಅತೀ ಸಣ್ಣ ರೈತರಾಗಿರವುದಿಲ್ಲ. ಸದರಿ ಜಮೀನುಗಳು ಮಾಸೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವುದಿಲ್ಲ. ಅವು ಹಿರೇಮೊರಬ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತವೆ.

47. ಮಾಸೂರು ಗ್ರಾಮ ಪಂಚಾಯತಿಯ ಹಾಲಿ ಅಧ್ಯಕ್ಷರಾದ ಶ್ರೀ ರಾಜು ಕುರುವತ್ತೆಪ್ಪ ಸುಣಗಾರ ಇವರ ಹಾಗೂ ಅವರ ಸಹೋದರರಾದ ಶ್ರೀ ಚಂದ್ರಶೇಖರ ಸುಣಗಾರ ಮತ್ತು ಶ್ರೀ ಮಲ್ಲಿಕಾರ್ಜುನ ಸುಣಗಾರ ಇವರುಗಳ ಹೆಸರಿನಲ್ಲಿರುವ 3 ಕಾಮಗಾರಿಗಳ ಕಡತದಲ್ಲಿರುವ ಪೋಟೋಗಳು ಒಂದೇ ತರವಾಗಿರುತ್ತವೆ.

48. ಬಿ.ಟಿ.ಪಾಟೀಲ್ ಹೈಸ್ಕೂಲ್ ಎಡೆಡ್ ಸ್ಕೂಲ್ ಆಗಿದ್ದು, ಈ ಶಾಲೆಯನ್ನು ಸರ್ವಜ್ಞ ವಿದ್ಯಾಪೀಠ ಖಾಸಗಿ ಸಂಸ್ಥೆಯು ನಡೆಸುತ್ತದೆ. ಸದರಿ ಹೈಸ್ಕೂಲಿನ ಆವರಣದಲ್ಲಿ ಅನುಧಾನ ಪಡೆಯದ ಆಂಗ್ಲ ಮಾಧ್ಯಮ ಶಾಲೆ, ನರ್ಸರಿ, ಕಾಲೇಜುಗಳು ಇರುತ್ತವೆ. ಸರ್ಕಾರ ನಡೆಸುತ್ತಿರುವ ಶಾಲೆಗಳಿಗೆ ಎನ್.ಆರ್.ಇ.ಜಿ. ಯೋಜನೆಯಲ್ಲಿ ಕಾಂಪೌಂಡ್ ನಿರ್ಮಾಣ ಮಾಡಿಕೊಳ್ಳಲು ಅವಕಾಶವಿರುತ್ತದೆ. ಆದರೆ ಪಿಡಿಓ ಮತ್ತು ಅಧ್ಯಕ್ಷರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಎನ್.ಆರ್.ಇ.ಜಿ. ಯೋಜನೆಯಲ್ಲಿ ತಲಾ 8 ಲಕ್ಷಗಳ 1) ಮಾಸೂರು ಗ್ರಾಮದ ಬಿ.ಟಿ.ಪಾಟೀಲ್ ಹೈಸ್ಕೂಲ್ ಆಟದ ಮೈದಾನ ಸಮತಟ್ಟು ಮಾಡುವುದು 2) ಮಾಸೂರು ಗ್ರಾಮದ ಬಿ.ಟಿ. ಪಾಟೀಲ ಹೈಸ್ಕೂಲ್‌ಗೆ ಮೈದಾನ ಅಭಿವೃದ್ಧಿ ಪಡಿಸುವುದು. 3) ಮಾಸೂರು ಗ್ರಾಮದ ಬಿ.ಟಿ. ಪಾಟೀಲ ಹೈಸ್ಕೂಲ್‌ಗೆ ರಕ್ಷಣಾ ಗೋಡೆ ನಿರ್ಮಾಣ ಮಾಡುವ ಕಾಮಗಾರಿಗಳನ್ನು ಕೈಕೊಂಡಿರುತ್ತಾರೆ.

49. **ಮಾಸೂರು ಗ್ರಾಮದ ಬಿ.ಟಿ.ಪಾಟೀಲ್ ಹೈಸ್ಕೂಲ್ ಆಟದ ಮೈದಾನ ಸಮತಟ್ಟು ಮಾಡುವುದು** ಈ ಕಾಮಗಾರಿಗೆ ಅಂದಾಜು ಪತ್ರಿಕೆಯನ್ನು ಶ್ರೀ ಅನಿಲಕುಮಾರ, ಎನ್.ಆರ್.ಇ.ಜಿ. ತಾಂತ್ರಿಕ ಸಹಾಯಕ ಇಂಜಿನಿಯರ್ ರವರು ಅಂದಾಜು ಪತ್ರಿಕೆಯನ್ನು ತಯಾರಿಸಿಕೊಂಡಿರುತ್ತಾರೆ. ಸದರಿ ಅಂದಾಜು ಪತ್ರಿಕೆಗೆ ತಾಂತ್ರಿಕ ಅನುಮೋಧನೆ ಪಡೆದುಕೊಂಡ ಬಗ್ಗೆ ಮಾಹಿತಿ ಇಲ್ಲ. ದಿನಾಂಕ.20-01-2018 ಆಡಳಿತಾತ್ಮಕ ಅನುಮೋಧನೆಯನ್ನು ಪಿಡಿಓ ಮತ್ತು ಅಧ್ಯಕ್ಷರು ನೀಡಿರುತ್ತಾರೆ.

50. ಪಿಡಿಓ ರವರು ದಿ.20-12-2016 ರಂದು ಕಾಮಗಾರಿ ಆದೇಶ ನೀಡಿರುತ್ತಾರೆ. ಅಂದಾಜು ಪತ್ರಿಕೆ ತಯಾರಿಸುವ ಪೂರ್ವದಲ್ಲಿಯೇ ಕಾಮಗಾರಿ ಆದೇಶ ನೀಡಿದ್ದು, ನಿಯಮಗಳ ಉಲ್ಲಂಘನೆಯಾಗಿರುತ್ತದೆ.

51. ಸಾಗಾಣಿಕೆ ಚಾರ್ಜಗಾಗಿ ಶ್ರೀ ಡಿ.ಎಸ್.ಸಿದ್ದಲಿಂಗಪ್ಪನವರ, ಕಂಟ್ರಾಕ್ಟರ್ ಮಾಸೂರು ಇವರು ಸಲ್ಲಿಸಿಕೊಂಡ ದರಪಟ್ಟಿಯನ್ನು ಪಿಡಿಓ ರವರು ಒಪ್ಪಿಕೊಂಡು, ಅವರಿಗೆ ಸಾಗಾಣಿಕೆ ಚಾರ್ಜಗಾಗಿ ಕಾರ್ಯಾದೇಶ ನೀಡಿದ್ದು, ಅದರಂತೆ ಟ್ರ್ಯಾಕ್ಟರ್ ಬಾಡಿಗೆ ಬಿಲ್ ಮೊತ್ತ ರೂ.76,000/-ಗಳ ಕೋಟೇಶನ್ ಬಿಲ್ ನಂ.499 ದಿ.10-02-2018, ಬಿಲ್ ಮೊತ್ತ ರೂ.76,000/-ಗಳ ಬಿಲ್ ನಂ. 223 ದಿ.10-02-2018, ಬಿಲ್ ಮೊತ್ತ ರೂ.76,000/-ಗಳ ಬಿಲ್ ನಂ. 224 ದಿ.10-02-2018, ಬಿಲ್ ಮೊತ್ತ ರೂ.76,000/-ಗಳ ಬಿಲ್ ನಂ. 225 ದಿ.10-02-2018, ಮೊರಂ ಪೂರೈಕೆ

ಬಿಲ್ ಮೊತ್ತ ರೂ.76,000/-ಗಳ ಬಿಲ್ ನಂ. 226 ದಿ.10-02-2018, ಬಿಲ್ ಮೊತ್ತ ರೂ.76,000/-ಗಳ ಬಿಲ್ ನಂ. 227 ದಿ.10-02-2018 ನೇದ್ದವುಗಳನ್ನು ಒಂದೇ ದಿನ ಗ್ರಾಮ ಪಂಚಾಯತಿಗೆ ಸಲ್ಲಿಸಿಕೊಂಡಿರುತ್ತಾರೆ. ಪಿಡಿಓ ರವರು ಸದರಿ ಬಿಲ್ಲುಗಳಿಗೆ ಇಂಜಿನಿಯರ್‌ರವರಿಂದ ದೃಢೀಕರಣ ಮಾಡಿಸಿಕೊಳ್ಳದೇ ಬಿಲ್ಲುಗಳಲ್ಲಿ ನಮೂದಿಸಿದ ಮೊತ್ತವನ್ನು ಎಫ್‌ಟಿಓ ಮುಖಾಂತರ ಡಿ.ಎಸ್. ಸಿದ್ದಲಿಂಗಪ್ಪನವರ ಇವರ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ.

52. ಈ ಕಾಮಗಾರಿಯಲ್ಲಿ ಕೂಲಿಕಾರರಿಗೆ ಒಟ್ಟು ರೂ. 3,70,048/-ಗಳನ್ನು ಮತ್ತು ಸಾಮಗ್ರಿಗಾಗಿ ಒಟ್ಟು ರೂ.4,11,912/-ಗಳನ್ನು ಒಟ್ಟು ರೂ.7,81,960/-ಗಳನ್ನು ಪಿಡಿಓ ಮತ್ತು ಅಧ್ಯಕ್ಷರು ಖರ್ಚು ಮಾಡಿರುತ್ತಾರೆ.
53. ಈ ಕಾಮಗಾರಿಗಳಲ್ಲಿ ತಗೆಯಲಾದ ಫೋಟೋಗಳನ್ನು ಗಮನಿಸಿದಾಗ ಟ್ರ್ಯಾಕ್ಟರ್‌ಗಳಿಂದ ತಂದು ಮೈದಾನದಲ್ಲಿ ಗುಡ್ಡೆ ಹಾಕಿದ ಮಣ್ಣನ್ನು 4-5 ಕೂಲಿಕಾರರು ಹರಡುತ್ತಿರುವ ದೃಶ್ಯವಿರುತ್ತವೆ.
54. **ಮಾಸೂರು ಗ್ರಾಮದ ಬಿ.ಟಿ.ಪಾಟೀಲ್ ಹೈಸ್ಕೂಲ್ ಮೈದಾನ ಸಮತಟ್ಟು ಮಾಡುವುದು** ಈ ಕಾಮಗಾರಿಗೆ ಅಂದಾಜು ಪತ್ರಿಕೆಯನ್ನು ಶ್ರೀ ಅನಿಲಕುಮಾರ, ಎನ್.ಆರ್.ಇ.ಜಿ. ತಾಂತ್ರಿಕ ಸಹಾಯಕ ಇಂಜಿನಿಯರ್ ರವರು ಅಂದಾಜು ಪತ್ರಿಕೆಯನ್ನು ತಯಾರಿಸಿಕೊಂಡಿರುತ್ತಾರೆ. ಸದರಿ ಅಂದಾಜು ಪತ್ರಿಕೆಗೆ ದಿ.13-07-2017 ರಂದು ಎ.ಇ.ಇ. ಪಂ.ರಾ.ಇಂ.ಉಪವಿಭಾಗ, ಹಿರೇಕೆರೂರು ರವರು ತಾಂತ್ರಿಕ ಅನುಮೋಧನೆ ನೀಡಿರುತ್ತಾರೆ. ದಿನಾಂಕ.03-06-2017 ಆಡಳಿತಾತ್ಮಕ ಅನುಮೋಧನೆಯನ್ನು ಪಿಡಿಓ ಮತ್ತು ಅಧ್ಯಕ್ಷರು ನೀಡಿರುತ್ತಾರೆ.
55. ಪಿಡಿಓ ರವರು ದಿ.23-01-2018 ರಂದು ಕಾಮಗಾರಿ ಆದೇಶ ನೀಡಿರುತ್ತಾರೆ. ಅಂದಾಜು ಪತ್ರಿಕೆ ತಯಾರಿಸಿದ 6 ತಿಂಗಳ ನಂತರ ಕಾಮಗಾರಿ ಆದೇಶ ನೀಡಿರುತ್ತಾರೆ.
56. ಸಾಗಾಣಿಕೆ ಚಾರ್ಜಗಾಗಿ ಶ್ರೀ ಸಂತೋಷ ಕಾಪ್ಲೇಕರ್, ಕಂಟ್ರಾಕ್ಟರ್ ರಟ್ಟಿಹಳ್ಳಿ ಇವರು ಸಲ್ಲಿಸಿಕೊಂಡ ದರಪಟ್ಟಿಯನ್ನು ಪಿಡಿಓ ರವರು ಒಪ್ಪಿಕೊಂಡು, ಅವರಿಗೆ ಸಾಗಾಣಿಕೆ ಚಾರ್ಜಗಾಗಿ ಕಾರ್ಯಾದೇಶ ನೀಡಿದ್ದು, ಅದರಂತೆ ಟ್ರ್ಯಾಕ್ಟರ್ ಬಾಡಿಗೆ ಬಿಲ್ ಮೊತ್ತ ರೂ.56,240/-ಗಳ ಬಿಲ್ ನಂ.44 ದಿ.11-09-2018, ಬಿಲ್ ಮೊತ್ತ ರೂ.76,000/-ಗಳ ಬಿಲ್ ನಂ. 45 ದಿ.11-09-2018, ಮೊರಂ ಪೂರೈಕೆ ಬಿಲ್ ಮೊತ್ತ ರೂ.81054/-ಗಳ ಬಿಲ್ ನಂ. 46 ದಿ.11-09-2018, ಬಿಲ್ ಮೊತ್ತ ರೂ.95,511/-ಗಳ ಬಿಲ್ ನಂ. 57 ದಿ.07-09-2018 ನೇದ್ದವುಗಳನ್ನು ಒಂದೇ ದಿನ ಗ್ರಾಮ ಪಂಚಾಯತಿಗೆ

ಸಲ್ಲಿಸಿಕೊಂಡಿರುತ್ತಾರೆ. ಪಿಡಿಓ ರವರು ಸದರಿ ಬಿಲ್ಲುಗಳಿಗೆ ಇಂಜಿನಿಯರ್‌ರವರಿಂದ ದೃಢೀಕರಣ ಮಾಡಿಸಿಕೊಳ್ಳದೇ ಬಿಲ್ಲುಗಳಲ್ಲಿ ನಮೂದಿಸಿದ ಮೊತ್ತವನ್ನು ಎಫ್‌ಟಿಓ ಮುಖಾಂತರ ಸಂತೋಷ ಕಾಪ್ಲೇಕರ್ ಇವರ ಬ್ಯಾಂಕ್ ಖಾತೆಗೆ ಜಮಾ ಮಾಡಲು ಕ್ರಮ ಕೈಕೊಂಡಿದ್ದು, ಇನ್ನೂ ಒಟ್ಟು ಬಿಲ್ಲುಗಳ ಮೊತ್ತ ರೂ.3,08,805/-ಜಮಾ ಆಗಿರುವುದಿಲ್ಲ.

57. ಈ ಕಾಮಗಾರಿಯಲ್ಲಿ ಕೂಲಿಕಾರರಿಗೆ ಒಟ್ಟು ರೂ. 4,49,294/-ಗಳನ್ನು ಪಿಡಿಓ ಮತ್ತು ಅಧ್ಯಕ್ಷರು ಖರ್ಚು ಮಾಡಿರುತ್ತಾರೆ. ಸಾಮಗ್ರಿಗಳ ಒಟ್ಟು ಮೊತ್ತ ರೂ.3,08,805/-ಗಳನ್ನು ಇನ್ನೂ ಪಾವತಿಸಿರುವುದಿಲ್ಲ.
58. ಈ ಕಾಮಗಾರಿಗಳಲ್ಲಿ ತೆಗೆಯಲಾದ ಪೋಟೋಗಳನ್ನು ಗಮನಿಸಿದಾಗ ಸಮತಟ್ಟು ಆಗಿರುವ ಮೈದಾನಕ್ಕೆ ಮತ್ತೆ ಟ್ರ್ಯಾಕ್ಟರ್‌ಗಳಿಂದ ತಂದು ಮೈದಾನದಲ್ಲಿ ಗುಡ್ಡೆ ಹಾಕಿದ ಮಣ್ಣನ್ನು 4-5 ಕೂಲಿಕಾರರು ಹರಡುತ್ತಿರುವ ದೃಶ್ಯವಿರುತ್ತವೆ.
59. **ಮಾಸೂರು ಗ್ರಾಮದ ಬಿ.ಟಿ.ಪಾಟೀಲ್ ಹೈಸ್ಕೂಲ್‌ಗೆ ರಕ್ಷಣಾ ಗೋಡೆ ನಿರ್ಮಾಣ ಮಾಡುವುದು** ಈ ಕಾಮಗಾರಿಗೆ ಅಂದಾಜು ಪತ್ರಿಕೆಯನ್ನು ಶ್ರೀ ಅನಿಲಕುಮಾರ, ಎನ್.ಆರ್.ಇ.ಜಿ. ತಾಂತ್ರಿಕ ಸಹಾಯಕ ಇಂಜಿನಿಯರ್ ರವರು ಅಂದಾಜು ಪತ್ರಿಕೆಯನ್ನು ತಯಾರಿಸಿಕೊಂಡಿರುತ್ತಾರೆ. ಸದರಿ ಅಂದಾಜು ಪತ್ರಿಕೆಗೆ ದಿ.14-07-2017 ರಂದು ಎ.ಇ.ಇ. ಪಂ.ರಾ.ಇಂ.ಉಪವಿಭಾಗ, ಹಿರೇಕೆರೂರು ರವರು ತಾಂತ್ರಿಕ ಅನುಮೋಧನೆ ನೀಡಿರುತ್ತಾರೆ. ದಿನಾಂಕ.03-06-2017 ಆಡಳಿತಾತ್ಮಕ ಅನುಮೋಧನೆಯನ್ನು ಪಿಡಿಓ ಮತ್ತು ಅಧ್ಯಕ್ಷರು ನೀಡಿರುತ್ತಾರೆ.
60. ಪಿಡಿಓ ರವರು ದಿ.20-12-2016 ರಂದು ಕಾಮಗಾರಿ ಆದೇಶ ನೀಡಿರುತ್ತಾರೆ. ಅಂದಾಜು ಪತ್ರಿಕೆ ತಯಾರಿಸುವ ಪುರ್ವದಲ್ಲಿಯೇ ಪಿಡಿಓ ರವರು ಕಾಮಗಾರಿ ಆದೇಶ ನೀಡಿ, ನಿಯಮಾವಳಿಗಳನ್ನು ಉಲ್ಲಂಘಿಸಿರುತ್ತಾರೆ.
61. ಸ್ಟೀಲ್ ಪೂರೈಕೆಗಾಗಿ ವಿ.ಎಸ್.ಟ್ರೇಡರ್ಸ್ ಇವರು ಸಲ್ಲಿಸಿಕೊಂಡ ದರಪಟ್ಟಿಯನ್ನು ಪಿಡಿಓ ರವರು ಒಪ್ಪಿಕೊಂಡು, ಅವರಿಗೆ ಸಾಗಾಣಿಕೆ ಚಾರ್ಜಗಾಗಿ ಕಾರ್ಯಾದೇಶ ನೀಡಿದ್ದು, ಅದರಂತೆ 1729 ಕೆ.ಜಿ. ಸ್ಟೀಲ್ ಪೂರೈಕೆ ಮಾಡಿದ ಜಿಎಸ್‌ಟಿ ಸೇರಿ ಬಿಲ್ ಮೊತ್ತ ರೂ. 104495/-ಗಳ ಬಿಲ್ ನಂ.104 ದಿ.27-09-2017 ನೇದ್ದನ್ನು ಗ್ರಾಮ ಪಂಚಾಯತಿಗೆ ಸಲ್ಲಿಸಿಕೊಂಡಿರುತ್ತಾರೆ. ಪಿಡಿಓ ರವರು ಸದರಿ ಬಿಲ್ಲುಗಳಿಗೆ ಇಂಜಿನಿಯರ್‌ರವರಿಂದ ದೃಢೀಕರಣ ಮಾಡಿಸಿಕೊಳ್ಳದೇ ರೂ.1,04,483.47/-ಗಳ ಮೊತ್ತವನ್ನು ಎಫ್‌ಟಿಓ ಮುಖಾಂತರ ವಿ.ಎನ್.ಟ್ರೇಡರ್ಸ್ ರವರ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ.

62. ಸಿಮೆಂಟ್ ಪೂರೈಕೆಗಾಗಿ ಬಾಲಾಜಿ ಟ್ರೇಡರ್ಸ್ ಇವರು ಸಲ್ಲಿಸಿಕೊಂಡ ದರಪಟ್ಟಿಯನ್ನು ಪಿಡಿಓ ರವರು ಒಪ್ಪಿಕೊಂಡು, ಅವರಿಗೆ ಸಾಗಾಣಿಕೆ ಚಾರ್ಜಗಾಗಿ ಕಾರ್ಯಾದೇಶ ನೀಡಿದ್ದು, ಅದರಂತೆ 2000 ಬ್ಯಾಗು ಸಿಮೆಂಟ್ ಪೂರೈಕೆ ಮಾಡಿದ ಜಿಎಸ್‌ಟಿ ಸೇರಿ ಬಿಲ್ ಮೊತ್ತ ರೂ. 69000/-ಗಳ ಬಿಲ್ ನಂ.110 ದಿ.08-11-2017 ನೇದ್ದನ್ನು ಗ್ರಾಮ ಪಂಚಾಯತಿಗೆ ಸಲ್ಲಿಸಿಕೊಂಡಿರುತ್ತಾರೆ. ಪಿಡಿಓ ರವರು ಸದರಿ ಬಿಲ್ಲುಗಳಿಗೆ ಇಂಜಿನಿಯರ್‌ರವರಿಂದ ದೃಢೀಕರಣ ಮಾಡಿಸಿಕೊಳ್ಳದೇ ಬಿಲ್ಲುಗಳಲ್ಲಿ ನಮೂದಿಸಿದ ಮೊತ್ತವನ್ನು ಎಫ್‌ಟಿಓ ಮುಖಾಂತರ ಬಾಲಾಜಿ ಟ್ರೇಡರ್ಸ್ ರವರ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ.

63. ಇಟ್ಟಂಗಿ ಪೂರೈಕೆಗಾಗಿ ಅತಾವುಲ್ಲಾ ಬಡಗಿ ಸಾ:ಮಾಸೂರು ಇವರು ಸಲ್ಲಿಸಿಕೊಂಡ ದರಪಟ್ಟಿಯನ್ನು ಪಿಡಿಓ ರವರು ಒಪ್ಪಿಕೊಂಡು, ಅವರಿಗೆ ಸಾಗಾಣಿಕೆ ಚಾರ್ಜಗಾಗಿ ಕಾರ್ಯಾದೇಶ ನೀಡಿದ್ದು, ಅದರಂತೆ 11500 ಇಟ್ಟಂಗಿಗಳನ್ನು ಪೂರೈಕೆ ಮಾಡಿದ ಬಿಲ್ ಮೊತ್ತ ರೂ. 69000/-ಗಳ ಬಿಲ್ ನಂ.7 ದಿ.08-11-2017 ಮತ್ತು ಬಿಲ್ ಮೊತ್ತ ರೂ.69000/-ಗಳ ಬಿಲ್ ನಂ.8 ದಿ.08-11-2017 ನೇದ್ದನ್ನು ಗ್ರಾಮ ಪಂಚಾಯತಿಗೆ ಸಲ್ಲಿಸಿಕೊಂಡಿರುತ್ತಾರೆ. ಪಿಡಿಓ ರವರು ಸದರಿ ಬಿಲ್ಲುಗಳಿಗೆ ಇಂಜಿನಿಯರ್‌ರವರಿಂದ ದೃಢೀಕರಣ ಮಾಡಿಸಿಕೊಳ್ಳದೇ ಬಿಲ್ಲುಗಳಲ್ಲಿ ನಮೂದಿಸಿದ ಮೊತ್ತವನ್ನು ಎಫ್‌ಟಿಓ ಮುಖಾಂತರ ಬಾಲಾಜಿ ಟ್ರೇಡರ್ಸ್ ರವರ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ. ಅತಾವುಲ್ಲಾ ಬಡಗಿ ಇವರ ಖಾತೆಗೆ ಹಣವನ್ನು ಜಮಾ ಮಾಡದೇ ಬಾಲಾಜಿ ಟ್ರೇಡರ್ಸ್ ಇವರ ಖಾತೆಗೆ ಜಮಾ ಮಾಡಿರುತ್ತಾರೆ.

64. ಈ ಕಾಮಗಾರಿಯಲ್ಲಿ ಡಿ.ಎಸ್.ಸಿದ್ದಲಿಂಗಪ್ಪನವರ ಇವರು ಟ್ರ್ಯಾಕ್ಟರ್ ಬಾಡಿಗೆಗೆ ಬಿಟ್ಟಿದ್ದು ಮತ್ತು ನ್ಯೂಬೋರ್ಡಗಳನ್ನು ಪೂರೈಸಿದ ಬಿಲ್ಲಿನ ಮೊತ್ತ ರೂ.46,580/-ಗಳ ಬಿಲ್ ನಂ.250 ದಿ.08-11-2017 ನೇದ್ದನ್ನು ಗ್ರಾಮ ಪಂಚಾಯತಿಗೆ ಸಲ್ಲಿಸಿಕೊಂಡಿರುತ್ತಾರೆ. ಪಿಡಿಓ ರವರು ಸದರಿ ಬಿಲ್ಲಿನ ಮೊತ್ತವನ್ನು ಇನ್ನೂ ಎಫ್‌ಟಿಓ ಮುಖಾಂತರ ಜಮಾ ಮಾಡಿಸಲು ಕ್ರಮ ಕೈಕೊಂಡಿರುವುದಿಲ್ಲ.

65. ಈ ಕಾಮಗಾರಿಯಲ್ಲಿ ಕೂಲಿಕಾರರಿಗೆ ಒಟ್ಟು ರೂ. 4,72,236/- ಮತ್ತು ಸಾಮಗ್ರಿ ಮೊತ್ತ ರೂ.3,11,483.47/- ಒಟ್ಟು ರೂ.7,83,719.47/-ಗಳನ್ನು ಪಿಡಿಓ ಮತ್ತು ಅಧ್ಯಕ್ಷರು ಖರ್ಚು ಮಾಡಿರುತ್ತಾರೆ. ಟ್ರ್ಯಾಕ್ಟರ್ ಬಾಡಿಗೆ ಮತ್ತು

ನ್ಯೂ ಬೋರ್ಡ ಪೂರೈಸಿದ ಬಿಲ್ಲಿನ ಮೊತ್ತ ರೂ.46,580/-ಗಳನ್ನು ಇನ್ನೂ ಪಾವತಿಸಿರುವುದಿಲ್ಲ.

66. ಈ ಕಾಮಗಾರಿಗಳಲ್ಲಿ ತಗೆಯಲಾದ ಪೋಟೋಗಳನ್ನು ಗಮನಿಸಿದಾಗ 5-6 ಪುರುಷ ಕೂಲಿಕಾರರು ಕೆಲಸ ಮಾಡುತ್ತಿರುವ ದೃಶ್ಯವಿರುತ್ತವೆ. ಎನ್.ಎಂ.ಆರ್.ಗಳಲ್ಲಿ ಮಹಿಳಾ ಕೂಲಿಕಾರರು ಸಹ ಕೆಲಸ ನಿರ್ವಹಿಸಿದ ಬಗ್ಗೆ ನಮೂದಿಸಿದ್ದು ಆದರೆ ಅವರು ಕೆಲಸ ಮಾಡುತ್ತಿರುವ ದೃಶ್ಯಗಳ ಒಂದು ಪೋಟೋಗಳು ಇರುವುದಿಲ್ಲ.

67. **ಮಾಸೂರು ಗ್ರಾಮದ ವೀರುಪಾಕ್ಷಪ್ಪ ಕೆಂಪಣ್ಣನವರ ಜಮೀನಿನಲ್ಲಿ ರಿ.ಸ.ನಂ.147 ರಲ್ಲಿ ಕಲ್ಲು ಪಿಚ್ಚಿಂಗ್ ಮತ್ತು ಭೂ ಅಭಿವೃದ್ಧಿ ಪಡಿಸುವುದು** ಈ ಕಾಮಗಾರಿಯು ಗ್ರಾಮ ಪಂಚಾಯತಿ ಸದಸ್ಯರಾಗಿರುವ ಶ್ರೀ ಚನ್ನಬಸಪ್ಪ ರಾಮಜ್ಜನವರ ಇವರ ಮಾವನ ಜಮೀನು ಇರುತ್ತದೆ. ಸದರಿ ಜಮೀನನ್ನು ರಾಮಜ್ಜನವರ ಇವರು ಲಾವಣಿ ಮಾಡಿಕೊಂಡಿರುತ್ತಾರೆ. ಸದರಿ ಜಮೀನನ್ನು ಇವರು ಎನ್.ಆರ್.ಇ.ಜಿ. ಯೋಜನೆಯಲ್ಲಿ ಅಭಿವೃದ್ಧಿ ಪಡಿಸಿಕೊಂಡಿರುತ್ತಾರೆ. ಅಂದಾಜು ಪತ್ರಿಕೆಯನ್ನು ಶ್ರೀ ಕೆ.ವಿ.ಚಂದ್ರಯ್ಯ, ಎ.ಇ., ಏತ ನೀರಾವರಿ ಉಪವಿಭಾಗ, ಹಾನಗಲ್ ರವರು ಅಂದಾಜು ಪತ್ರಿಕೆಯನ್ನು ತಯಾರಿಸಿಕೊಂಡಿರುತ್ತಾರೆ. ಸದರಿ ಅಂದಾಜು ಪತ್ರಿಕೆಗೆ ದಿ.14-02-2018 ರಂದು ಎ.ಇ.ಇ. ಏತ ನೀರಾವರಿ ಉಪವಿಭಾಗ,ಹಾನಗಲ್ ರವರು ತಾಂತ್ರಿಕ ಅನುಮೋಧನೆ ನೀಡಿರುತ್ತಾರೆ. ದಿನಾಂಕ.15-02-2018 ಆಡಳಿತಾತ್ಮಕ ಅನುಮೋಧನೆಯನ್ನು ಪಿಡಿಓ ಮತ್ತು ಅಧ್ಯಕ್ಷರು ನೀಡಿರುತ್ತಾರೆ.

68. ಸಾಗಾಣಿಗೆ ಚಾರ್ಜಗಾಗಿ ಡಿ.ಎಸ್.ಸಿದ್ದಲಿಂಗಪ್ಪನವರ ಇವರು ಸಲ್ಲಿಸಿಕೊಂಡ ದರಪಟ್ಟಿಯನ್ನು ಪಿಡಿಓ ರವರು ಒಪ್ಪಿಕೊಂಡು, ಅವರಿಗೆ ಸಾಗಾಣಿಕೆ ಚಾರ್ಜಗಾಗಿ ಕಾರ್ಯಾದೇಶ ನೀಡಿದ್ದು, ಆದರೆ ರಮೇಶ ಕೆ.ಜೆ. ಇವರು ಸಪ್ಲೈ ಟ್ರಾನ್ಸಪೋರ್ಟ ಬಿಲ್ ಮೊತ್ತ ರೂ.63,840/- ಬಿಲ್ ನಂ.19 ದಿನಾಂಕ.15-06-2018, ಬಿಲ್ ಮೊತ್ತ ರೂ.91,200/- ಬಿಲ್ ನಂ.14 ದಿ.30-05-2018 ನೇದ್ದವುಗಳನ್ನು ಗ್ರಾಮ ಪಂಚಾಯತಿಗೆ ಸಲ್ಲಿಸಿಕೊಂಡಿರುತ್ತಾರೆ. ಪಿಡಿಓ ರವರು ಸದರಿ ಬಿಲ್ಲುಗಳಿಗೆ ಇಂಜನಿಯರ್‌ರವರಿಂದ ದೃಢೀಕರಣ ಮಾಡಿಸಿಕೊಳ್ಳದೇ ಸದರಿ ಬಿಲ್ಲುಗಳ ಮೊತ್ತವನ್ನು ಎಫ್‌ಟಿಓ ಮುಖಾಂತರ ಜಮಾ ಮಾಡಲು ಕ್ರಮ ಕೈಕೊಂಡಿದ್ದು, ಇನ್ನೂ ಬಿಲ್ಲುಗಳ ಮೊತ್ತ ಜಮಾ ಆಗಿರುವುದಿಲ್ಲ.

69. ಸಾಗಾಣಿಗೆ ಚಾರ್ಜಗಾಗಿ ರಮೇಶ ಕೆ.ಜೆ. ಇವರು ಸಲ್ಲಿಸಿಕೊಂಡ ದರಪಟ್ಟಿಯನ್ನು ಪಿಡಿಓ ರವರು ಒಪ್ಪಿಕೊಂಡು, ಅವರಿಗೆ ಸಾಗಾಣಿಕೆ ಚಾರ್ಜಗಾಗಿ ಕಾರ್ಯಾದೇಶ ನೀಡಿದ್ದು, ಅದರಂತೆ ಅವರು ಬಿಲ್ ಮೊತ್ತ ರೂ.30400/- ಬಿಲ್ ನಂ.48 ದಿ.15-06-2018, ಬಿಲ್ ಮೊತ್ತ ರೂ.36,400/- ಬಿಲ್ ನಂ.13 ದಿ.08-09-2018 ನೇದ್ದವುಗಳನ್ನು ಗ್ರಾಮ ಪಂಚಾಯತಿಗೆ ಸಲ್ಲಿಸಿಕೊಂಡಿರುತ್ತಾರೆ. ಪಿಡಿಓ ರವರು ಸದರಿ ಬಿಲ್ಲುಗಳಿಗೆ ಇಂಜಿನಿಯರ್‌ರವರಿಂದ ದೃಢೀಕರಣ ಮಾಡಿಸಿಕೊಳ್ಳದೇ ಸದರಿ ಬಿಲ್ಲುಗಳ ಮೊತ್ತವನ್ನು ಎಫ್‌ಟಿಓ ಮುಖಾಂತರ ಜಮಾ ಮಾಡಲು ಕ್ರಮ ಕೈಕೊಂಡಿದ್ದು, ಇನ್ನೂ ಬಿಲ್ಲುಗಳ ಮೊತ್ತ ಜಮಾ ಆಗಿರುವುದಿಲ್ಲ.
70. ಈ ಕಾಮಗಾರಿಯಲ್ಲಿ ಕೂಲಿಕಾರರಿಗೆ ಒಟ್ಟು ರೂ. 2,55,335/-ಗಳನ್ನು ಪಿಡಿಓ ಮತ್ತು ಅಧ್ಯಕ್ಷರು ಖರ್ಚು ಮಾಡಿರುತ್ತಾರೆ. ಸಾಮಗ್ರಿಗಳ ಬಿಲ್ಲುಗಳ ಮೊತ್ತ ರೂ.2,21,920/-ಗಳನ್ನು ಇನ್ನೂ ಪಾವತಿಸಿರುವುದಿಲ್ಲ.
71. ಈ ಕಾಮಗಾರಿಗಳಲ್ಲಿ ತಗೆಯಲಾದ ಪೋಟೋಗಳನ್ನು ಗಮನಿಸಿದಾಗ ಎನ್‌ಆರ್‌ಇಜಿ ಯೋಜನೆಯ ಕೂಲಿಕಾರರು ಕೆಲಸ ಮಾಡುತ್ತಿರುವ ದೃಶ್ಯ ಒಂದು ಇರುವುದಿಲ್ಲ. ಗ್ರಾಮ ಪಂಚಾಯತಿ ಸದಸ್ಯ ಚನ್ನಬಸಪ್ಪ ರಾಮಜ್ಜನವರ ಇವರು ನಿಂತುಕೊಂಡಿರುವ ದೃಶ್ಯವಿರುತ್ತದೆ. ಕಡತದಲ್ಲಿ ಇರುವ ಪೋಟೋಗಳನ್ನು ಗಮನಿಸಿದಾಗ ಸಾಗುವಳಿಯಲ್ಲಿರುವ ಮತ್ತು ಸಮತಟ್ಟಾಗಿದ್ದ ಜಮೀನುಗಳಿಗೆ ಕೆರೆಗಳಿಂದ ಟ್ರ್ಯಾಕ್ಟರ್‌ಗಳಲ್ಲಿ ಮಣ್ಣನ್ನು ತಂದು ಹರಡಿಸಲು ಮತ್ತು ಬದುವಿಗೆ ಕಲ್ಲುಗಳನ್ನು ಒಟ್ಟಿಸಲು ಸರ್ಕಾರದ ಹಣವನ್ನು ಉಪಯೋಗಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
72. ಮೇಲ್ಕಂಡ ಎಲ್ಲಾ ಕಾಮಗಾರಿಗಳ ಎನ್.ಆರ್.ದಲ್ಲಿ ನಮೂದಿಸಿದ ಕೂಲಿಕಾರರ ಹೆಸರುಗಳ ಮುಂದೆ ಇರುವ ಸಹಿಗಳನ್ನು ಒಬ್ಬನೇ ವ್ಯಕ್ತಿ, ಒಂದೇ ಸಮಯದಲ್ಲಿ ಮಾಡಿದಂತೆ ಕಂಡುಬರುತ್ತವೆ. ಕೆನಾರಾ ಬ್ಯಾಂಕಿನಿಂದ ಪಡೆದುಕೊಂಡ ಕೂಲಿಕಾರರ ಮಾದರಿ ಸಹಿ ಮತ್ತು ಕೆ.ವಿ.ಜಿ. ಬ್ಯಾಂಕಿನಿಂದ ಪಡೆದುಕೊಂಡ ಕೂಲಿಕಾರರ ವಿತ್‌ಡ್ರಾ ಸ್ಲೀಪಿನಲ್ಲಿರುವ ಸಹಿಗಳು ಮತ್ತು ಎನ್.ಎಂ.ಆರ್.ಗಳಲ್ಲಿರುವ ಸಹಿಗಳು ಹೊಂದಾಣಿಕೆ ಇರುವುದಿಲ್ಲ.
73. ಸದರಿ 11 ಕಾಮಗಾರಿಗಳ ಮೊತ್ತವನ್ನು ಸಾಮಾಜಿಕ ಪರಿಶೋಧನಾ ಸಂಯೋಜಕರು ಆಕ್ಷೇಪಣೆಯಲ್ಲಿ ಇಟ್ಟಿರುತ್ತಾರೆ. ಈ 11 ಕಾಮಗಾರಿಗಳಲ್ಲಿ ಕೆಲವು ಕಾಮಗಾರಿಗಳ ಮೊತ್ತವನ್ನು ವಸೂಲಾತಿಗೆ ಸಹ ಸೂಚಿಸಿರುತ್ತಾರೆ.
74. ಮಾಸೂರು ಗ್ರಾಮ ಪಂಚಾಯತಿಯ ಪಿಡಿಓ, ಅಧ್ಯಕ್ಷರು, ಗ್ರಾಮ ಪಂಚಾಯತಿ ಕೆಲವು ಸದಸ್ಯರು ಮತ್ತು ಇಂಜಿನಿಯರುಗಳು ಈ ಮೇಲ್ಕಂಡ

ಎಲ್ಲಾ ಕಾಮಗಾರಿಗಳಲ್ಲಿ ಸರ್ಕಾರದ ಹಣವನ್ನು ದುರ್ಬಳಕೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

**ವಿಚಾರಣಾಧಿಕಾರಿಗಳ ಅಭಿಪ್ರಾಯ:-**

ರಾಜು ಕು.ಸುಣಗಾರ, ಅಧ್ಯಕ್ಷರು, ಗಿರೀಶ ಓಲೇಕಾರ ಪಿಡಿಓ ಮಾಸೂರ ಇವರಿಬ್ಬರು ಸೇರಿಕೊಂಡು ಎಂ.ಜಿ.ಎನ್.ಆರ್.ಇ.ಜಿ. ಯೋಜನೆಯಲ್ಲಿ ಅಪಾರ ಪ್ರಮಾಣದಲ್ಲಿ ಬ್ರಷ್ಟಾಚಾರ ಹಾಗೂ ಅಧಿಕಾರ ದುರ್ಬಳಕೆ ಮಾಡಿಕೊಂಡು ಸರಕಾರಿ ಹಣ ದುರ್ಬಳಕೆ ಮಾಡಿಕೊಂಡ ಬಗ್ಗೆ ಶ್ರೀ ಮೋಹನ ನನ್ನೂರಿ ಸಾ: ಮಾಸೂರು ಮತ್ತು ಶ್ರೀ ರಘು ಚನ್ನಗಿರಿ ಸಾ: ಮಾಸೂರು ಇವರ ಹೆಸರಿನಲ್ಲಿ ಬೇರೆ ಯಾರೋ ಅರ್ಜಿಯನ್ನು ಮಾಡಿಕೊಂಡಿರುತ್ತಾರೆ.

ಅರ್ಜಿಯಲ್ಲಿ ನಮೂದಿಸಿದಂತೆ ಕೆಲವು ಆರೋಪಗಳು ಮೇಲ್ನೋಟಕ್ಕೆ ಸಾಭೀತು ಆಗಿರುತ್ತವೆ.

1) ಶ್ರೀ ಗಿರೀಶ ಭೀಮಪ್ಪ ಓಲೇಕಾರ, ಪಿಡಿಓ ಇವರು ದಿನಾಂಕ 24-06-2016 ರಿಂದ ಇಲ್ಲಿಯವರಗೆ ಮಾಸೂರು ಗ್ರಾಮ ಪಂಚಾಯತಿಯಲ್ಲಿ ಪ್ರಭಾರ ಪಿಡಿಓ ಅಂತಾ ಕೆಲಸ ನಿರ್ವಹಿಸಿಕೊಂಡಿರುತ್ತಾರೆ. ಇವರು ತಮ್ಮ ಕರ್ತವ್ಯದ ವೇಳೆಯಲ್ಲಿ ಅರ್ಹತೆ ಇಲ್ಲದಿದ್ದರೂ ಸಹ ಮತ್ತು ನಿಯಮಾವಳಿಗಳ ಪ್ರಕಾರ ಭೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಕೊಳ್ಳಲು ರೂ.10,000/-ಗಳನ್ನು ಮತ್ತು ಪ್ಯಾಕೇಜ್ ಕಾಮಗಾರಿಗಳಿಗಾಗಿ ರೂ.83,000/-ಗಳನ್ನು ಖರ್ಚು ಮಾಡಲು ಅವಕಾಶ ಇದ್ದಾಗ್ಯೂ ಸಹ ಪಿಡಿಓ ರವರು ನಿಯಮಾವಳಿಗಳನ್ನು ಉಲ್ಲಂಘಿಸಿ 1) ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಬಲದಂಡೆ ಕಾಲುವೆಗೆ ಹೊಂದಿಕೊಂಡು ಇರುವ ಸಾವಿತ್ರಮ್ಮ ಕ್ವಾರಡಿ ಇವರ ಜಮೀನಿನಲ್ಲಿ ಕಲ್ಲು ಪಿಚ್ಚಿಂಗ್ ಮತ್ತು ಭೂ ಅಭಿವೃದ್ಧಿ ಪಡಿಸುವುದು (ಅಂದಾಜು ಮೊತ್ತ ರೂ. 5 ಲಕ್ಷ, ಖರ್ಚಾದ ಮೊತ್ತದ ಕೂಲಿ ಮೊತ್ತ ರೂ.2,69,528 ಪಾವತಿಯಾಗದ ಸಾಮಗ್ರಿ ಮೊತ್ತ ರೂ.2,21,920/-ಗಳು) 2) ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಎಡದಂಡೆ ಕಾಲುವೆಗೆ ಹೊಂದಿಕೊಂಡಿರುವ ಶ್ರೀ ಮಲ್ಲೇಶಪ್ಪ ಕ್ವಾರಡಿ ಇವರ ಜಮೀನಿನಲ್ಲಿ ಭೂಮಿ ಸಮತಟ್ಟು ಮತ್ತು ಕಲ್ಲು ಪಿಚ್ಚಿಂಗ್ ಮಾಡುವುದು (ಅಂದಾಜು ಮೊತ್ತ ರೂ. 3 ಲಕ್ಷ, ಖರ್ಚಾದ ಮೊತ್ತದ ಕೂಲಿ ಮೊತ್ತ ರೂ.,1,35,464/--, ಖರ್ಚಾದ ಸಾಮಗ್ರಿ ಮೊತ್ತ ರೂ. 2,59,920/- ಒಟ್ಟು ರೂ.3,95,384/-ಗಳನ್ನು, ಅಂದಾಜು ಮೊತ್ತಕ್ಕಿಂತ ರೂ.95,348/-ಗಳನ್ನು ಹೆಚ್ಚುವರಿಯಾಗಿ ಪಾವತಿಸಿರುತ್ತಾರೆ) 3) ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಎಡದಂಡೆ ಕಾಲುವೆಗೆ ಹೊಂದಿಕೊಂಡು ಇರುವ ಕೊಟ್ರಪ್ಪ ಸಜ್ಜನಶೆಟ್ರ ಇವರ ಜಮೀನಿನಲ್ಲಿ ಕಲ್ಲು ಪಿಚ್ಚಿಂಗ್ ಮತ್ತು ಭೂ ಅಭಿವೃದ್ಧಿ

ಪಡಿಸುವುದು ( ಅಂದಾಜು ಮೊತ್ತ ರೂ. 4.90 ಲಕ್ಷ, ಖರ್ಚಾದ ಮೊತ್ತದ ಕೂಲಿ ಮೊತ್ತ ರೂ.,1,65,200/-, ಖರ್ಚಾದ ಸಾಮಗ್ರಿ ಮೊತ್ತ ರೂ. 1,91,520/- ಒಟ್ಟು ರೂ.3,56,720/-ಗಳನ್ನು ಪಾವತಿಸಿರುತ್ತಾರೆ) 4) ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಬಲದಂಡೆ ಕಾಲುವೆಗೆ ಹೊಂದಿಕೊಂಡು ಇರುವ ರಾಜು ಕುರವತ್ತೆಪ್ಪ ಸುಣಗಾರ ಇವರ ಜಮೀನಿನಲ್ಲಿ ಕಲ್ಲು ಪಿಚ್ಚಿಂಗ್ ಮತ್ತು ಭೂ ಸಮತಟ್ಟು ಮಾಡುವುದು (ಅಂದಾಜು ಮೊತ್ತ ರೂ. 4.50 ಲಕ್ಷ, ಖರ್ಚಾದ ಮೊತ್ತದ ಕೂಲಿ ಮೊತ್ತ ರೂ.,2,64,299/-, ಖರ್ಚಾದ ಸಾಮಗ್ರಿ ಮೊತ್ತ ರೂ. 103360/- ಒಟ್ಟು ರೂ.367659/-ಗಳನ್ನು ಪಾವತಿಸಿರುತ್ತಾರೆ. ಇನ್ನೂ ರೂ.68400/-ಗಳ ಸಾಮಗ್ರಿ ಮೊತ್ತ ಪಾವತಿಯಾಗಬೇಕಾಗಿದೆ.) 5) ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಬಲದಂಡೆ ಕಾಲುವೆಗೆ ಹೊಂದಿಕೊಂಡು ಇರುವ ಚಂದ್ರಶೇಖರ ಸುಣಗಾರ ಇವರ ಜಮೀನಿನಲ್ಲಿ ಭೂ ಅಭಿವೃದ್ಧಿ ಪಡಿಸುವುದು (ಅಂದಾಜು ಮೊತ್ತ ರೂ. 4.50 ಲಕ್ಷ, ಖರ್ಚಾದ ಮೊತ್ತದ ಕೂಲಿ ಮೊತ್ತ ರೂ.,2,64,299/-, ಖರ್ಚಾದ ಸಾಮಗ್ರಿ ಮೊತ್ತ ರೂ. 118560/- ಒಟ್ಟು ರೂ.382859/-ಗಳನ್ನು ಪಾವತಿಸಿರುತ್ತಾರೆ. ಇನ್ನೂ ರೂ.60800/-ಗಳ ಸಾಮಗ್ರಿ ಮೊತ್ತ ಪಾವತಿಯಾಗಬೇಕಾಗಿದೆ.) 6) ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಬಲದಂಡೆ ಕಾಲುವೆಗೆ ಹೊಂದಿಕೊಂಡು ಇರುವ ಮಲ್ಲಿಕಾರ್ಜುನ ಸುಣಗಾರ ಇವರ ಜಮೀನಿನಲ್ಲಿ ಭೂ ಅಭಿವೃದ್ಧಿ ಪಡಿಸುವುದು (ಅಂದಾಜು ಮೊತ್ತ ರೂ. 4.50 ಲಕ್ಷ, ಖರ್ಚಾದ ಮೊತ್ತದ ಕೂಲಿ ಮೊತ್ತ ರೂ.,2,66,042/-, ಖರ್ಚಾದ ಸಾಮಗ್ರಿ ಮೊತ್ತ ರೂ. 115520/- ಒಟ್ಟು ರೂ.381562/-ಗಳನ್ನು ಪಾವತಿಸಿರುತ್ತಾರೆ. ಇನ್ನೂ ರೂ.59280/-ಗಳ ಸಾಮಗ್ರಿ ಮೊತ್ತ ಪಾವತಿಯಾಗಬೇಕಾಗಿದೆ.) 7) ಮಾಸೂರು ಗ್ರಾಮದ ವೀರುಪಾಕ್ಷಪ್ಪ ಕೆಂಪಣ್ಣನವರ ಜಮೀನಿನಲ್ಲಿ ರಿ.ಸ.ನಂ.147 ರಲ್ಲಿ ಕಲ್ಲು ಪಿಚ್ಚಿಂಗ್ ಮತ್ತು ಭೂ ಅಭಿವೃದ್ಧಿ ಪಡಿಸುವುದು (ಅಂದಾಜು ಮೊತ್ತ ರೂ. 4.90 ಲಕ್ಷ, ಖರ್ಚಾದ ಮೊತ್ತದ ಕೂಲಿ ಮೊತ್ತ ರೂ.,255335/-ಗಳನ್ನು ಪಾವತಿಸಿರುತ್ತಾರೆ. ಇನ್ನೂ ಸಾಮಗ್ರಿ ಮೊತ್ತ ರೂ.221920/-ಗನ್ನು ಪಾವತಿಯಾಗಬೇಕಾಗಿದೆ.) ಕಾಮಗಾರಿಗಳನ್ನು ಕೈಕೊಂಡಿರುತ್ತಾರೆ. ಮೇಲ್ಕಂಡ ಎಲ್ಲಾ ಜಮೀನುಗಳು ಬೆಳೆಗಳನ್ನು ಬೆಳೆಯಲು ಯೋಗ್ಯವಾದ ಜಮೀನುಗಳು ಆಗಿರುತ್ತವೆ. ಸದರಿ ಜಮೀನುಗಳಿಗೆ ಕೆರೆಗಳಿಂದ ಮಣ್ಣನ್ನು ಟ್ರ್ಯಾಕ್ಟರ್ ಮುಖಾಂತರ ತಂದು ಹರಡಿ ಸಮತಟ್ಟು ಮಾಡಿರುತ್ತಾರೆ. ಮಲ್ಲೇಶಪ್ಪ ಕ್ವಾರಡಿ ಇವರ ಹೆಸರಿನ ಜಮೀನಿನಲ್ಲಿ ಕಲ್ಲು ಪಿಚ್ಚಿಂಗ್ ಮಾತ್ರ ಮಾಡಿರುತ್ತಾರೆ. ವೀರುಪಾಕ್ಷಪ್ಪ ಕೆಂಪಣ್ಣನವರ ಇವರ ಜಮೀನಿನಲ್ಲಿ ಸಮತಟ್ಟು ಮತ್ತು ಕಲ್ಲು ಪಿಚ್ಚಿಂಗ್ ಮಾಡಿರುತ್ತಾರೆ. ಅಲ್ಲದೇ

ವೀರುಪಾಕ್ಷಪ್ಪ ಕೆಂಪಣ್ಣನವರ ಇವರ ಜಮೀನನ್ನು ಹೊರತು ಪಡಿಸಿ ಉಳಿದ ಜಮೀನುಗಳು ಮಾಸೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಬೋರವೆಲ್‌ಗಳ ಮುಖಾಂತರ ಬೆಳೆಗಳನ್ನು ಬೆಳೆಯಲು ನೀರಾವರಿ ಸೌಲಭ್ಯ ಇರುವಂತ ಎಲ್ಲಾ ಜಮೀನುಗಳಿಗೆ ಕೆರೆಗಳಿಂದ ಮಣ್ಣನ್ನು ಹೇರಿಸಿ (ಕೂಲಿಕಾರರ ಖಾತೆಗೆ ಜಮಾ ಮಾಡಿದ ಹಣ ರೂ.16,20,167/-,ಸಾಮಗ್ರಿ ಪೂರೈಕೆದಾರರರ ಖಾತೆಗೆ ಜಮಾ ಮಾಡಿದ ಹಣ ರೂ.7,88,880/-, ಸಾಮಗ್ರಿ ಪೂರೈಕೆದಾರರಿಗೆ ಪಾವತಿಸಬೇಕಾದ (ಎಂ.ಐ.ಎಸ್.ಆಗಿದೆ) ಹಣ ರೂ.6,32,320/-ಒಟ್ಟು ರೂ.3041367) ಈ 7 ಕಾಮಗಾರಿಗಳು ಸೇರಿ ಒಟ್ಟು ರೂ.30,41,367/-ಗಳ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಮಾಸೂರು ಗ್ರಾಮದ ಮದಗ ಮಾಸೂರು ಕೆರೆಯ ಎಡದಂಡೆ ಕಾಲುವೆಗೆ ಹೊಂದಿಕೊಂಡು ಇರುವ ಕೊಟ್ರಪ್ಪ ಸಜ್ಜನಶೆಟ್ರ ಇವರ ಜಮೀನಿನ ಹತ್ತಿರ ನೀರಾವರಿ ಕಾಲುವೆಗೆ ಸಿ.ಡಿ.ನಿರ್ಮಾಣ ಮಾಡುವುದು (ಅಂದಾಜು ಮೊತ್ತ ರೂ.3 ಲಕ್ಷ, ಖರ್ಚಾದ ಮೊತ್ತದ ಕೂಲಿ ಮೊತ್ತ ರೂ.,97,468/-,ಖರ್ಚಾದ ಸಾಮಗ್ರಿ ಮೊತ್ತ ರೂ. 108290/-ಒಟ್ಟು ರೂ.205758/-ಗಳನ್ನು ಪಾವತಿಸಿರುತ್ತಾರೆ). ಗ್ರಾಮ ಪಂಚಾಯತಿ ಸದಸ್ಯರಾಗಿರುವ ರೇಣುಕಪ್ಪ ಸಜ್ಜನಶೆಟ್ರು ಇವರ ಸಹೋದರ ಕೋಟ್ರಪ್ಪ ಸಜ್ಜನಶೆಟ್ರು ಇವರಿಗೆ ಅನುಕೂಲ ಮಾಡಿಕೊಡಲು ಮಾಸೂರು ಗ್ರಾಮ ಪಂಚಾಯತಿಗೆ ಒಳಪಡದಿದ್ದರೂ ಸಹ ಅವರ ಜಮೀನಿನ ಹತ್ತಿರ ಸಿ.ಡಿ. ನಿರ್ಮಾಣ ಮಾಡಿ ಸರ್ಕಾರದ ಹಣ ರೂ.2,05,758/-ಗಳನ್ನು ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

